# कुलपतीनां वचः



विश्वस्मिन् जगतीतले सुज्ञानमेतत् यत् धन्येयं भारतभूः या आमरीवचसा विभूषितपदा । महदिदं प्रमोदस्थानं भारतीयानां परम्परा महर्षिभिः विपश्चिद्भिः सुदृढीकृता इति भारतीयशास्त्रीयपरम्परायाः गीर्वाणवचनोपभृंहितायाः सारम् आग्रहं विना मुक्तावसरे सामान्यान् प्रत्यपि प्रदातुं भारतीयसंस्कृतविश्वविद्यालयाः कटिबद्धाः । तत्र च कर्नाटकप्रदेशीयः कर्नाटकसंस्कृतविश्वविद्यालयः जनशेमुर्षीं अनुकूलयिष्यन् विनूतनान् कार्यक्रमान् योजयामास । विश्वविद्यालयतः आयोजितानां कार्याणां विहगदृष्टिः अत्र वरिवर्ति । वार्तापत्रमिदं पूर्वषण्मासतः कृतानां कार्याणां, शैक्षणिकाधिगमस्य नूतनपाठ्यक्रमरचनायाः स्वरूपं धन्यताभावपुरस्सरं प्रकटयति । न केवलं कर्नाटकराज्ये, अपि च राष्ट्रियस्तरे च प्रत्यग्रकृतिः विश्वविद्यालयतः सन्ध्यामहाविद्यालयस्य स्थापनम् । अपि च पाठ्यक्रमस्यापि अक्षुण्णावृत्तिः कृतेति महान् प्रमोदः । दशतरुणविद्वांसः नैकशास्त्रेषु निष्णाताः तौलनिकाध्ययने पारङ्गताः सहायकप्राध्यापकस्थाने विराजन्ते इति आमोदः ।

व्यक्तिविवेकादीनाम् उद्ग्रन्थानां संस्कृतभाषातः कन्नडभाषायाम् अनुवादः उदात्तशैल्या विश्वविद्यालयेन प्रकाशितः ।

**''इदमन्धन्तमः कृत्स्नं जायेत भुवनत्रयम् ।**
**यदि शब्दाह्वयं ज्योतिरासंसारं न दीप्यते ॥''**

इत्युक्तनुसारेण ग्रन्थप्रकाशे पाठ्यविष्करणे उद्युक्ताः वयम् । वार्तापत्रमिदं न केवलं कृतकार्याणां सूचकम् अपि च भवितव्यकार्याणां कृते स्फूर्तिदायकं इतीयं ऋतवाक् । वार्तापत्रनिर्माणे कृतभूरिपरिश्रमान् सम्पादकान् प्रति अभिनन्दनानि । शं भवतु सर्वेषाम् इति आशास्महे । जयतु संस्कृतम् । जयतु भारतम् ।

**कुलपतिः**
कर्नाटकसंस्कृतविश्वविद्यालयः
बेङ्गलूरुनगरी

# ಸಂಪಾದಕೀಯ



ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯವಿಧಾನಕ್ಕೆ ವಾರ್ತಾಪತ್ರವು ಒಂದು ಕನ್ನಡಿಯಂತೆ. ಪ್ರತಿಮೂರು ತಿಂಗಳಲ್ಲಿ ನಡೆದ ಕಾರ್ಯಚಟುವಟಿಕೆಗಳ ಒಟ್ಟು ಮೊತ್ತ ಇಲ್ಲಿ ಪ್ರತಿಬಿಂಬಿತವಾಗುತ್ತದೆ. ಸಮಗ್ರರಾಜ್ಯದಲ್ಲಿ ಪಾರಂಪರಿಕ ಸಂಸ್ಕೃತ ಶಿಕ್ಷಣದ ಬೆಳವಣಿಗೆ ಇಲ್ಲಿ ದಾಖಲಾಗುತ್ತದೆ. ಈ ಹಿನ್ನೆಲೆಯಲ್ಲಿ ವಾರ್ತಾಪತ್ರಕ್ಕೆ ಒಂದು ಮಹತ್ತ್ವವಿದೆ.

ಕಳೆದ ವರ್ಷದ ಎರಡು ತ್ರೈಮಾಸಿಕ ಸಂಚಿಕೆಗಳನ್ನು ಸೇರಿಸಿ ಒಂದು ಸಂಪುಟಗೊಳಿಸಿ ಈ ವಾರ್ತಾಪತ್ರವನ್ನು ಪ್ರಕಟಿಸಲಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ವಿಶ್ವವಿದ್ಯಾಲಯವು ಆರಂಭಿಸಿದ ಸಂಧ್ಯಾಸಂಸ್ಕೃತ ಮಹಾವಿದ್ಯಾಲಯದ ಉದ್ಘಾಟನಾ ಸಮಾರಂಭವನ್ನು ಪ್ರಮುಖವಾಗಿ ಪರಿಗಣಿಸಲಾಗಿದೆ. ಈ ತರಹದ ಪ್ರಯೋಗವು ಭಾರತದಲ್ಲಿ ಸರ್ವಪ್ರಥಮ ಮತ್ತು ಅಪೂರ್ವ ಪ್ರಯೋಗವಾಗಿದೆ. ಸಂಧ್ಯಾಕಾಲದಲ್ಲಿ ಉದ್ಯೋಗಿಗಳೂ, ಮಹಿಳೆಯರೂ ಸೇರಿದಂತೆ 60ಕ್ಕೂ ಹೆಚ್ಚು ಜನ ಸಂಸ್ಕೃತಾಧ್ಯಯನ ಆರಂಭಿಸಿದ್ದಾರೆ. ಈ ಉಪಕ್ರಮವನ್ನು ಬೆಂಗಳೂರಿನ ಸಂಸ್ಕೃತಾಸಕ್ತ ಸಮಾಜ ತುಂಬುಹೃದಯದಿಂದ ಸ್ವಾಗತಿಸಿದೆ. ವಿಶ್ವವಿದ್ಯಾಲಯದ ಇನ್ನೊಂದು ಪ್ರಧಾನವಾದ ಹೆಚ್ಚು ಪಠ್ಯಪುಸ್ತಕಗಳ ಪರಿಷ್ಕರಣೆ. 30 ವರ್ಷಗಳ ನಂತರ ಮೊದಲಬಾರಿಗೆ ಪರಿಷ್ಕೃತಗೊಂಡ ಪಠ್ಯಪುಸ್ತಕಗಳನ್ನು ನಿರ್ದೇಶನಾಲಯವು ಪ್ರಕಟಿಸಿ ಅನುಷ್ಠಾನಕ್ಕೆ ತಂದಿದೆ. ಘನತೆವೆತ್ತ ರಾಜ್ಯಪಾಲರು ಈ ಗ್ರಂಥಗಳನ್ನು ಲೋಕಾರ್ಪಣೆಗೊಳಿಸಿದರು.

ಇಂತಹ ಉಪಕ್ರಮಗಳನ್ನು ವೃತ್ತಪತ್ರಿಕೆಗಳಲ್ಲಿ ಓದಿ ಕೇಂದ್ರಸಾಹಿತ್ಯ ಅಕಾಡಮಿ ಪ್ರಶಸ್ತಿ ವಿಜೇತ ಕೇರಳದ ಪ್ರಸಿದ್ಧ ಸಂಸ್ಕೃತ ಕವಿಗಳಾದ ಡಾ|| ರಾಮಕೃಷ್ಣ ವಾರಿಯರ್ ಎಂಬುವರು ಬರೆದ ಅಭಿನಂದನ ಪತ್ರವನ್ನು ಈ ವಾರ್ತಾಪತ್ರದಲ್ಲಿ ಪ್ರಕಟಿಸಲಾಗಿದೆ. ಶ್ರಾವಣಮಾಸದಲ್ಲಿ ರಾಜ್ಯಾದ್ಯಂತ ಸಂಸ್ಕೃತ ಕಾಲೇಜು-ಪಾಠಶಾಲೆಗಳಲ್ಲಿ ನಡೆದ ಸಂಸ್ಕೃತೋತ್ಸವಗಳ ವೃತ್ತಾಂತವನ್ನು ಸಂಕ್ಷಿಪ್ತವಾಗಿ ಪ್ರಕಟಿಸಲಾಗಿದೆ. 2013 ಮತ್ತು 14ನೇ ಸಾಲಿನಲ್ಲಿ ನಡೆದ ಡಾ|| ಎಂ. ಹಿರಿಯಣ್ಣ ಗ್ರಂಥಪುರಸ್ಕಾರ ಕಾರ್ಯಕ್ರಮದ ವೃತ್ತಾಂತವನ್ನು ನೀಡಲಾಗಿದೆ. ಕಳೆದ ವರ್ಷ ವಿಶ್ವವಿದ್ಯಾಲಯದ ಸಹಯೋಗದಲ್ಲಿ ನಡೆದ ಅನೇಕ ಕಾರ್ಯಕ್ರಮಗಳಲ್ಲಿ ವಿಶಿಷ್ಟವಾದುದು- ವಿದ್ಯಾಲಂಕಾರ ಪ್ರೊ. ಸಾ.ಕೃ. ರಾಮಚಂದ್ರರಾಯರ ಸ್ಮರಣೆ, ಪದ್ಮಶ್ರೀ ಡಾ|| ಆರ್.ಕೆ. ಶ್ರೀಕಂಠನ್‌ರ ಸಂಗೀತ ಕಛೇರಿಯೊಂದಿಗೆ ಕೊನೆಯಾದ ಈ ಕಾರ್ಯಕ್ರಮದಲ್ಲಿ ಡಾ|| ಆರ್. ಗಣೇಶ್ ಮೊದಲಾದವರು ರಾಯರ ಕೃತಿಗಳನ್ನು ಕುರಿತು ಮಾತನಾಡಿದರು. ಆರಂಭದಲ್ಲಿ ಚಳ್ಳಕೆರೆ ಸಹೋದರರಿಂದ ವೇದಪಠಣ ನಡೆದಿತ್ತು. ಈ ಕಾರ್ಯಕ್ರಮದ ಕೆಲ ಛಾಯಾಚಿತ್ರಗಳು ಇಲ್ಲಿ ಮೂಡಿಬಂದಿವೆ. ಇಂತಹ ಅನೇಕ ಸ್ಮರಣೀಯ ಕಾರ್ಯಕ್ರಮಗಳನ್ನು ದಾಖಲಿಸುವ ಈ ವಾರ್ತಾಪತ್ರಕ್ಕೆ ಒಂದು ರೂಪು ನೀಡುವಲ್ಲಿ ಮತ್ತು ಅದನ್ನು ಹೊರತರುವಲ್ಲಿ ಶ್ರಮಿಸಿದ ಪ್ರಸಾರಾಂಗದ ನನ್ನ ಸಹೋದ್ಯೋಗಿಗಳಾದ ಡಾ|| ಕೃಷ್ಣಜೋಶಿ, ಡಾ|| ಸಂತೋಷ್ ಹಾನಗಲ್ಲ ಮತ್ತು ಡಾ|| ಬಿ. ಗೋವಿಂದ ಇವರಿಗೆ ಕೃತಜ್ಞತೆ ಹೇಳುತ್ತೇನೆ.

ಈ ಎರಡು ಸಂಚಿಕೆಗಳ ಒಂದು ಹೊತ್ತಗೆ ನಿಮ್ಮ ಕೈಯಲ್ಲಿ ಸಮರ್ಪಿತವಾಗಿದೆ.

ಇತಿ ತಮ್ಮ

**ಡಾ|| ಶ್ರೀನಿವಾಸ ವರಖೇಡಿ**

# ಸಂಸ್ಕೃತ ಸಂಧ್ಯಾ ಮಹಾವಿದ್ಯಾಲಯದ ಉದ್ಘಾಟನೆ

ವಿಶ್ವದ ಎಲ್ಲಾ ಭಾಷೆಗಳ ತಾಯಿಯಾಗಿರುವ ಸಂಸ್ಕೃತ ಮನುಷ್ಯ ಸಂಬಂಧಗಳು ಮತ್ತು ಸಂಸ್ಕೃತಿಯನ್ನು ಬೆಳೆಸುತ್ತದೆ. ಇಂತಹ ಪುರಾತನ ಭಾಷೆಯನ್ನು ಉಳಿಸಿ ಬೆಳೆಸಬೇಕಾದ ಹೊಣೆ ಎಲ್ಲರ ಮೇಲಿದೆ ಎಂದು ರಾಜ್ಯಪಾಲ ಡಾ. ಹೆಚ್.ಆರ್. ಭಾರದ್ವಾಜ್ ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಸಂಸ್ಕೃತ ಸಂಜೆ ಕಾಲೇಜು ಉದ್ಘಾಟನೆ ಮತ್ತು ಹೊಸ ಸಂಸ್ಕೃತ ಪಠ್ಯಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ವೇದಗಳ ಕಾಲದಿಂದಲೂ ಬಳಕೆಯಲ್ಲಿರುವ ಸಂಸ್ಕೃತದಲ್ಲಿ ಮನುಷ್ಯ ಸಂಬಂಧಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುತ್ತಿತ್ತು. ಗುರು-ಶಿಷ್ಯ ಮುಂತಾದ ಸಂಬಂಧಗಳ ಕುರಿತಾಗಿ ಇರುವ ಶ್ಲೋಕಗಳೇ ಇದಕ್ಕೆ ಸಾಕ್ಷಿ. ಕರ್ನಾಟಕದಲ್ಲಿನ ಶೃಂಗೇರಿಯಂತಹ ಧಾರ್ಮಿಕ ಕೇಂದ್ರಗಳಲ್ಲಿ ಸಂಸ್ಕೃತದ ಬಗ್ಗೆ ಪ್ರಚಾರ ನೀಡಲಾಗುತ್ತಿದೆ. ಕೇವಲ ಭಾರತದಲ್ಲಿ ಮಾತ್ರವಲ್ಲ, ಜರ್ಮನಿ ಮತ್ತಿತರ ದೇಶಗಳಲ್ಲಿಯೂ ಸಂಸ್ಕೃತ ಭಾಷೆಯ ಬಗ್ಗೆ ಆಸಕ್ತಿ ಹೊಂದಿರುವ, ಅದನ್ನು ಅಧ್ಯಯನ ಮಾಡಿರುವ ಜ್ಞಾನಿಗಳಿದ್ದಾರೆ. ಆದ್ದರಿಂದ ಈ ಸಂಸ್ಕೃತ ವಿಶ್ವವಿದ್ಯಾಲಯದ ಜಾಗತಿಕ ಮಟ್ಟದ ಕೊಡುಗೆಯಾಗಿದೆ ಎಂದು ಶ್ಲಾಘಿಸಿದರು.

ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಎನ್. ಕುಮಾರ್ ಮಾತನಾಡಿ, ಸಾಹಿತ್ಯ ಮತ್ತು ಸಂಸ್ಕೃತದ ಅರಿವಿಲ್ಲದಿದ್ದರೆ ಭಾರತದ ಇತಿಹಾಸವನ್ನು ತಿಳಿಯಲು ಅಸಾಧ್ಯ. ಕನ್ನಡ ಬೆಳೆಯಬೇಕೆಂಬ ಕಾರಣಕ್ಕೆ ಸಂಸ್ಕೃತವನ್ನು ತುಳಿಯಬೇಕೆಂದಿಲ್ಲ. ಯಾವ ತಾಯಿಯೂ ತನ್ನ ಮಗುವಿನ ಬೆಳವಣಿಗೆ ಕುರಿತು ಅಸೂಯೆ ಪಟ್ಟುಕೊಳ್ಳುವುದಿಲ್ಲ. ಹಾಗೆಯೇ ಎಲ್ಲಾ ಭಾಷೆಗಳ ತಾಯಿಯಾದ ಸಂಸ್ಕೃತ ಇತರೆ ಭಾಷೆಗಳನ್ನು ಪೋಷಿಸುತ್ತಾ ಬಂದಿದೆ. ಇಂತಹ ಭಾಷೆಗೂ ಆದ್ಯತೆ ನೀಡಿ ದೇವ ಭಾಷೆಯನ್ನು ಉಳಿಸಬೇಕು ಎಂದರು.

ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯ ಮಾತನಾಡಿ, ಸಂಸ್ಕೃತದಲ್ಲಿ ಹಲವಾರು ಶಾಸ್ತ್ರಗ್ರಂಥಗಳಿವೆ. ಆದರೆ ಕನ್ನಡದಲ್ಲಿ ಒಂದೂ ಶಾಸ್ತ್ರಗ್ರಂಥವಿಲ್ಲ. ಸಂಸ್ಕೃತ ಪಂಡಿತರು ಈ ಕುರಿತು ಕಾಳಜಿ ವಹಿಸಿ ಸಂಸ್ಕೃತದ ಶಾಸ್ತ್ರಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿದರೆ ಕನ್ನಡದ ಮೂಲಕ ಸಂಸ್ಕೃತದ ಬೆಳವಣಿಗೆಯೂ ಸಾಧ್ಯವಾಗುತ್ತದೆ. ಎಲ್ಲ ಭಾಷೆಗಳ ತಾಯಿ ಸಂಸ್ಕೃತಕ್ಕೆ ತನ್ನ ಮಕ್ಕಳನ್ನು ಪೊರೆಯಬೇಕಾದ ಜವಾಬ್ದಾರಿಯಿದೆ. ಯಾವುದೇ ಭಾಷೆಗಳ ನಡುವೆ ಕೊಂಡುಕೊಳ್ಳುವಿಕೆಯ ಸಂಬಂಧ ಅತೀ ಮುಖ್ಯವಾದುದು ಎಂದು ಹೇಳಿದರು.

ಇತ್ತೀಚೆಗೆ ಯುವಪೀಳಿಗೆ ತಾಂತ್ರಿಕ ಜಂಜಾಟಗಳ ನಡುವೆಯೂ ವೇದಾಭ್ಯಾಸ ಪುರಾಣಗಳ ಕುರಿತು ಆಸಕ್ತಿ ವಹಿಸುತ್ತಿದ್ದಾರೆ. ಸಂಸ್ಕೃತ ಅಧ್ಯಯನ ಮಾಡುತ್ತಿರುವ ಪದವಿ ಕಾಲೇಜುಗಳನ್ನು ಪತ್ತೆಹಚ್ಚಿ ದೇಶಕ್ಕೆ ಪರಿಚಯಿಸುವಲ್ಲಿ ಈ ಸಂಸ್ಕೃತ ವಿಶ್ವವಿದ್ಯಾಲಯ ಬಹಳ ಪ್ರಮುಖ ಪಾತ್ರವಹಿಸಿದೆ. ತನ್ನ ಶೈಕ್ಷಣಿಕ ಪ್ರಯೋಗಕ್ಕಾಗಿ ತಯಾರಿಸಿರುವ ಪಠ್ಯ ಪುಸ್ತಕಗಳೂ ಬಹಳ ಅಚ್ಚುಕಟ್ಟಾಗಿದ್ದು, ಸುಲಭವಾಗಿ ಅರ್ಥವಾಗುವಂತಿದೆ. ಈ ಬೆಳವಣಿಗೆಯಿಂದ ಪುರಾತನ ಭಾಷೆಯೊಂದಕ್ಕೆ ಶೈಕ್ಷಣಿಕ ಸ್ಥಾನಮಾನ ದೊರಕಿದಂತಾಗಿದೆ ಎಂದರು.

ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡಿ, ವಿಶ್ವವಿದ್ಯಾಲಯ ಈಗಾಗಲೇ ಎರಡು ಘಟಿಕೋತ್ಸವಗಳನ್ನು ಪೂರೈಸಿದ್ದು, 35 ಸಂಶೋಧನಾ ವಿದ್ಯಾರ್ಥಿಗಳನ್ನು ಹೊಂದಿದೆ. ಈ ಬಾರಿ ನೂತನ ಪಠ್ಯಪುಸ್ತಕಗಳನ್ನು ಹೊರತರುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಶೈಕ್ಷಣಿಕವಾಗಿ ಹೆಚ್ಚು ಗುರುತಿಸಿಕೊಳ್ಳುವ ನಿರೀಕ್ಷೆಯಿದೆ. ಸಂಸ್ಕೃತ ವಿಶ್ವವಿದ್ಯಾಲಯದ ಕಟ್ಟಡಕ್ಕೆ ಸರ್ಕಾರದಿಂದ 100 ಎಕರೆ ಜಾಗ ಕೊಡಲಾಗುವುದೆಂದು ಭರವಸೆ ನೀಡಿದ್ದಾರೆ. ಇದರಿಂದಾಗಿ ನಮಗೂ ಇನ್ನಷ್ಟು ಸ್ಫೂರ್ತಿ ಬಂದಂತಾಗಿದೆ. ಅಲ್ಲದೇ ಸಂಜೆ ಕಾಲೇಜನ್ನೂ ಆರಂಭಿಸುತ್ತಿರುವುದರಿಂದ ವಯಸ್ಸಿನ ಭೇದವಿಲ್ಲದೇ ಆಸಕ್ತರು ಬಂದು ಸಂಸ್ಕೃತ ಕಲಿಯಲು ಅವಕಾಶ ದೊರಕಿದಂತಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನೂತನ ಪಠ್ಯಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಪಿ.ಬಿ. ಸಂತಪ್ಪನವರ್, ನಿರ್ದೇಶಕರಾದ ಪ್ರೊ. ಗಿರೀಶ್ಚಂದ್ರ, ಪ್ರಾಂಶುಪಾಲರಾದ ಪ್ರೊ. ಕೆ.ಎಸ್. ಕಣ್ಣನ್ ಹಾಗೂ ಸಂಸ್ಕೃತ ವಿದ್ವಾಂಸರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವರದಿ : **ತೇಜಸ್ವಿನಿ ಡಿ.**
ಯೋಜನಾ ಸಹಾಯಕರು

# ಸಂಸ್ಕೃತ ಸಂಜೆ ಕಾಲೇಜು - ಒಂದು ನೋಟ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾದ ಮಾನ್ಯ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರ ಕನಸು ಸಂಸ್ಕೃತ ಸಂಜೆ ಕಾಲೇಜು. ಅದನ್ನು ನನಸಾಗಿಸಲು ಬೆಂಗಳೂರಿನ ಕೇಂದ್ರಸ್ಥಾನವಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಆವರಣದಲ್ಲಿಯೇ ಸಂಸ್ಕೃತ ಸಂಜೆ ಕಾಲೇಜಿನ ಆರಂಭವಾಗಿ ಇಂದು ಬೆಂಗಳೂರು ಜನರಿಗೆ ಸಂಸ್ಕೃತಾಧ್ಯಯನಕ್ಕೆ ಒಂದು ಅವಕಾಶ ಕಲ್ಪಿಸಿದೆ.

''ಸಂಸ್ಕೃತ ಸಂಜೆ ಕಾಲೇಜು'' ಎಂದು ಪರಿಚಿತಗೊಂಡ ಈ ಬಿ.ಎ. ತರಗತಿಯಲ್ಲಿ ಸಂಸ್ಕತವನ್ನು ಸಂಸ್ಕೃತ ಮಾಧ್ಯಮದಲ್ಲಿಯೇ ಬೋಧಿಸಲಾಗುವುದು. ಅದಕ್ಕೋಸ್ಕರ ಮೊದಲ ಒಂದು ತಿಂಗಳು ಬ್ರಿಡ್ಜ್ ಕೋರ್ಸನ್ನು ಮಾಡಿ ವಿದ್ಯಾರ್ಥಿಗಳಿಗೆ ಸಂಸ್ಕೃತದಲ್ಲಿಯೇ ಮಾತನಾಡುವ ತರಬೇತಿಯನ್ನು ನೀಡಲಾಗುವುದು.

**ಸಂಜೆ ಕಾಲೇಜಿನ ವಿಶೇಷತೆ :**

ಸಂಸ್ಕೃತವನ್ನು ಹಿಂದೆಂದೂ ಕಲಿಯದೇ ಸಂಸ್ಕೃತ ಭಾಷೆಯ ಬಗ್ಗೆ ಗೌರವ, ಅಭಿರುಚಿಯಿದ್ದು ಕಾಲಾವಕಾಶ ವಿಲ್ಲದೇ ವಿಮುಖಗೊಂಡವರು, ಸಂಸ್ಕೃತವನ್ನು ಪ್ರಾಥಮಿಕ ಹಂತದಲ್ಲಿ ಅಭ್ಯಸಿಸಿ ಸಂಸ್ಕೃತದಲ್ಲಿ ಅಭಿರುಚಿಯಿದ್ದೂ ನಂತರ ಬೇರೆ ಕಾರ್ಯಕ್ಷೇತ್ರವನ್ನು ತಮ್ಮದಾಗಿಸಿಕೊಂಡ ಎಲ್ಲಾ ಸಂಸ್ಕೃತಾಭಿಮಾನಿಗಳಿಗೆ ಹೀಗೊಂದು ಮುಕ್ತ ಅವಕಾಶವನ್ನು ನೀಡಲಾಯಿತು.

**ಸಂಸ್ಕೃತವೇ ಏಕೆ?!**

ಸಂಸ್ಕೃತ ಭಾರತದ ಜ್ಞಾನ ಭಂಡಾರ. ಹಿಂದೆ ಎಲ್ಲಾ ಶಾಸ್ತ್ರಗಳು ಸಂಸ್ಕೃತದಲ್ಲೇ ರಚಿತಗೊಂಡವು. ವೇದ, ಇತಿಹಾಸ, ಪುರಾಣಗಳೂ ಸಂಸ್ಕೃತ ಭಾಷೆಯಲ್ಲೇ ರಚಿಸಲ್ಪಟ್ಟವು. ಗಣಕಯಂತ್ರದ ಕ್ರಿಯಾ ಚಟುವಟಿಕೆಗಳಿಗೆ ಪಾಣಿನೀಯ ಅಷ್ಟಾಧ್ಯಾಯಿಯ ಕ್ರಮವನ್ನು ಅನುಸರಿಸಲಾಯಿತು. ವೈಜ್ಞಾನಿಕ, ಆಯುರ್ವೇದ, ಧಾರ್ಮಿಕ ದೃಷ್ಟಿಯಿಂದ ಸಂಸ್ಕೃತ, ವೇದ, ಉಪನಿಷತ್ತುಗಳನ್ನು ಅನುಕರಿಸಲಾಗುತ್ತಿತ್ತು. ಅನುಕರಿಸಲಾಗುತ್ತಿದೆ. ಚಾಣಕ್ಯನ ಅರ್ಥಶಾಸ್ತ್ರದ ಮೂಲಗ್ರಂಥವೂ ಇರುವುದು ಸಂಸ್ಕೃತ ಭಾಷೆಯಲ್ಲೇ. ಹೀಗೆ ಹೇರಳವಾದ ವಿದ್ಯಾಸಂಪನ್ಮೂಲದ ಉಗಮವು ಭಾರತ ದಲ್ಲಿಯೇ ಆದದ್ದು. ಇಂತಹ ವಿದ್ಯಾಸಂಪತ್ತು, ವೈಜ್ಞಾನಿಕ ಸಂಪತ್ತು, ಧಾರ್ಮಿಕ ಸಂಪತ್ತು ಭಾರತೀಯರದು. ಹಾಗಾಗಿ ಇಂದು ಆ ಸಂಪತ್ತಿನ ಉಪಯೋಗವನ್ನು ಪ್ರಸ್ತುತ ಸಮಾಜದಲ್ಲಿ ಮತ್ತೊಮ್ಮೆ ಬಳಸಲು ಯತ್ನಿಸುತ್ತಾ ವಿವಿಧೆಡೆಗಳಲ್ಲಿ ಸಂಸ್ಕೃತ ಸಂಶೋಧನಾ ಸಮಾವೇಶಗಳು ನಡೆಯುತ್ತಿವೆ. ಅಂತಹ ಸಂಪದ್ಭರಿತ ಸಂಸ್ಕೃತವನ್ನು ಕಲಿಯುವ ಅವಕಾಶ ಇಂದು ನಮ್ಮೆದುರಿಗಿದೆ. ಬನ್ನಿ ಕಲಿಯೋಣ ಸಂಸ್ಕೃತ, ಕಲಿಸೋಣ ಸಂಸ್ಕೃತ. ಮತ್ತೊಮ್ಮೆ ಬಾಣ, ಕಾಳಿದಾಸ, ಪಾಣಿನಿ, ಸುಶ್ರುತ, ವರಾಹಮಿಹಿರ ಮುಂತಾದವರ ಪಥದಲ್ಲಿ ನಾವು ಸಾಗೋಣ ಎಂದು ಬೆಂಗಳೂರಿನ ಜನತೆಗೆ ಕರೆನೀಡಲಾಯಿತು.

**ಈ ಸಂಜೆ ಕಾಲೇಜಿನಿಂದಾಗಿ ಹಲವರಿಗೆ ಉಪಯೋಗವಾಗುತ್ತದೆ.**

★ **ಐಟಿ ಬಿಟಿ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿಯ ಉದ್ಯೋಗಿಗಳಲ್ಲಿ ಅನೇಕರು ಶಾಸ್ತ್ರಾಧ್ಯಯನದಲ್ಲಿ ಆಸಕ್ತಿ ಹೊಂದಿರುವವರು.**

★ **ಬೆಂಗಳೂರಿನಲ್ಲಿರುವ ಅನೇಕ ಪಾಠಶಾಲೆಗಳಲ್ಲಿ ಸಂಸ್ಕೃತವನ್ನು ಪಾಠಮಾಡುತ್ತಿರುವ ಅಧ್ಯಾಪಕರಲ್ಲಿ ಉನ್ನತ ವಿದ್ಯಾಭಾಸದ ಆಸಕ್ತಿ ಹೊಂದಿರುವವರು.**

★ **ಉದ್ಯೋಗಿಗಳು/ಸ್ವಯಂ ಉದ್ಯೋಗಿಗಳು/ಮಹಿಳೆಯರು/ ನಿವೃತ್ತರು.**

★ **ಶೈಕ್ಷಣಿಕ ವರ್ಷದ ಆರಂಭದಲ್ಲಿ ಸಂಸ್ಕೃತ ಬ್ರಿಡ್ಜ್ ಕೋರ್ಸನ್ನು ಒಂದು ತಿಂಗಳವರೆಗೆ ನಡೆಸಲಾಗುವುದು.**

**ಪಾಠ್ಯ ವಿಷಯ :**

ವಿಶ್ವವಿದ್ಯಾಲಯಗಳ ಬಿ.ಎ. ಕೋರ್ಸ್‌ನಂತೆಯೇ ಇಲ್ಲಿ ಕೋರ್ಸ್ ಇರುತ್ತದೆ. ಸಂಸ್ಕೃತಭಾಷೆಯೊಂದಿಗೆ ಕನ್ನಡ/ ಇಂಗ್ಲೀಷ್‌ಗಳನ್ನು ಕಡ್ಡಾಯವಾಗಿ ಮೊದಲೆರಡು ವರ್ಷಗಳು ಕಲಿಯುವುದಲ್ಲದೇ ಐಚ್ಛಿಕ ವಿಷಯ (core subject) ವಾಗಿ ಸಂಸ್ಕೃತವನ್ನು ಅಧ್ಯಯನ ಮಾಡಬೇಕಾಗುತ್ತದೆ.

**ಶೈಕ್ಷಣಿಕ ಅರ್ಹತೆ :**

ಸಂಸ್ಕೃತ ಸಾಹಿತ್ಯ/ತತ್ಸಮಾನ ಪರೀಕ್ಷೆ/12ನೇ ತರಗತಿ/ಪಿ.ಯು.ಸಿ (ಸಂಸ್ಕೃತ)/ಯಾವುದೇ ವಿಶ್ವವಿದ್ಯಾಲಯದ ಸಂಸ್ಕೃತ ಡಿಪ್ಲೊಮಾ/ ಯಾವುದೇ ಇತರೆ ವಿಷಯದಲ್ಲಿ ಸ್ನಾತಕ-ಸ್ನಾತಕೋತ್ತರ ಪದವಿ ಅಥವಾ ಡಿಪ್ಲೊಮಾ ಪದವಿ ಪಡೆದಿದ್ದರೆ/ ಪಿ.ಯು.ಸಿ. ಪಡೆದಿದ್ದು ಸಂಸ್ಕೃತದಲ್ಲಿ ಯಾವುದೇ ಪದವಿ ಪಡೆಯದಿದ್ದರೂ ಸಹ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶಾವಕಾಶ ವಿರುತ್ತದೆ.

18 ವರ್ಷ ಮೇಲ್ಪಟ್ಟ ಅಭ್ಯರ್ಥಿಗಳಿಗೆ ಮುಕ್ತ ಅವಕಾಶ, ವಯೋಮಿತಿ ಇರುವುದಿಲ್ಲ.

ಈ ರೀತಿಯ ಜಾಹಿರಾತುಗಳನ್ನು ಪತ್ರಿಕಾ ಪ್ರಕಟನೆಗಳ ಮೂಲಕ, ಭಿತ್ತಿಪತ್ರಗಳ ಮೂಲಕ ಬೆಂಗಳೂರಿನ ಜನತೆಗೆ ಸಂದೇಶವನ್ನು ನೀಡಿದಾಗ ಬೆಂಗಳೂರಿನ ಜನತೆಯ ಆಸೆಯೂ ಈಡೇರಿತೇನೋ ಎಂಬಂತೆ ಅತ್ಯಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಆಗಮನವಾಯಿತು. ಯುವಕ/ಯುವತಿಯರು, ನಿವೃತ್ತರು, ಇತರ ಕ್ಷೇತ್ರಗಳಲ್ಲಿ ಕಾರ್ಯವನ್ನು ನಿರ್ವಹಿಸುತ್ತಿರುವ ಉದ್ಯೋಗಿಗಳು, ತಂತ್ರಜ್ಞರು, ಬ್ಯಾಂಕ್ ಉದ್ಯೋಗಿಗಳು, ಶಿಕ್ಷಕರು, ಉಪನ್ಯಾಸಕರು, ಅನ್ಯ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹೀಗೆ 18 ರಿಂದ 92 ವರ್ಷಗಳವರೆಗೂ ಇರುವ ನಾಗರೀಕರು ಸಂಸ್ಕೃತ ಸಂಜೆ ಕಾಲೇಜಿನ ವಿದ್ಯಾರ್ಥಿಗಳಾಗಿ, ವಿದ್ಯಾರ್ಥಿಗಳ ಸಂಖ್ಯೆ 60 ಮುಟ್ಟಿದಾಗ ಒತ್ತಾಯಪೂರ್ವಕವಾಗಿ ನೋಂದಣಿಯನ್ನು ನಿಲ್ಲಿಸಬೇಕಾಯಿತು.

ಬ್ರಿಡ್ಜ ಕೋರ್ಸನ್ನು ಪ್ರಾರಂಭಿಸಿದಾಗ ಸಂಸ್ಕೃತದ ಬಗ್ಗೆ ಏನೂ ಗೊತ್ತಿಲ್ಲದ ಹಲವಾರು ವಿದ್ಯಾರ್ಥಿಗಳು ಮೊದಲು ಹಿಂಜರಿದು ನಂತರ ಧೈರ್ಯದಿಂದ ತಮ್ಮಲ್ಲಿದ್ದ ಹೆದರಿಕೆ, ಹಿಂಜರಿಕೆಯನ್ನು ತೊರೆದು ಕಾರ್ಯಾಗಾರದಲ್ಲಿ ಭಾಗವಹಿಸುತ್ತಿರುವವರಾಗಿ ಕಂಡು ಬಂದರು. ಇಂದು ಅವರು ಸಂಸ್ಕೃತದಲ್ಲಿ ಸ್ವಲ್ಪ ಮಟ್ಟಿಗಾದರೂ ಸಮರ್ಥರಾಗಿ ಧೈರ್ಯದಿಂದ ತಮ್ಮ ಸಂಸ್ಕೃತ ಪ್ರಥಮ ಪರೀಕ್ಷೆಯನ್ನು ಬರೆಯಲು ಸಿದ್ಧತೆಯನ್ನು ಪಡೆದರು. ಮುಂದೆ ಅವರಿಗೆ ಸಂಸ್ಕೃತ ಸಾಹಿತ್ಯದ ಪಾಠ್ಯಗ್ರಂಥಗಳು ಪ್ರಾರಂಭವಾಯಿತು. ಅವುಗಳ ಸಾಹಿತ್ಯದ ರುಚಿಯ ಜೊತೆಗೆ ವ್ಯಾಕರಣ ವೈಶಿಷ್ಟ್ಯವನ್ನು ಅರಿತುಕೊಂಡರು. ಪ್ರೊ. ಕೆ.ಎಸ್. ಕಣ್ಣನ್‌ರವರು ಸಂಸ್ಕೃತ ಸಂಜೆ ಕಾಲೇಜಿನ ಪ್ರಾಂಶುಪಾಲರಾಗಿ ಉತ್ತಮವಾದ ಕಾರ್ಯವನ್ನು ನಿರ್ವಹಿಸುತ್ತಿರುವರು. ಇದರ ಇತರ ಜವಾಬ್ದಾರಿಯನ್ನು ಆರಂಭಿಕದಲ್ಲಿ ಅತ್ಯಂತ ಉತ್ಸಾಹದಿಂದ ಶ್ರೀಮತಿ ಡಿ. ತೇಜಸ್ವಿನಿಯವರು ನಡೆಸಿದರು. ನಂತರ ಸಹಾಯಕ ಪ್ರಾಧ್ಯಾಪಕರಾದ ಡಾ|| ವಿನಾಯಕಾಚಾರ್ಯರ ಸಂಯೋಜಕತ್ವದಲ್ಲಿ ವಿದ್ಯಾರ್ಥಿಗಳಿಂದ ಪ್ರತಿವಾರ ವಿಚಾರ ಸಂಕಿರ್ಣಗಳು ಮತ್ತು ಪ್ರೊಜೆಕ್ಟರ್ ಮೂಲಕ ವ್ಯಾಕರಣ ತರಗತಿಗಳು, ಸಂವಾದ, ಸಂಸ್ಕೃತ ದೃಶ್ಯಮಾಧ್ಯಮ, ಪ್ರತಿತಿಂಗಳು ವಿದ್ಯಾರ್ಥಿಗಳಿಗೆ ಕ್ಲಾಸ್‌ಟೆಸ್ಟ್‌ಗಳು, ಎಲ್ಲಾ ಪಾಠ್ಯಭಾಗದ ನೋಟ್ಸ್‌ಗಳನ್ನು ಸಂಯೋಜಕರಾದ ಡಾ|| ವಿನಾಯಕ ನಾಮಣ್ಣವರ ಇವರು ಸಿದ್ಧಪಡಿಸಿಕೊಟ್ಟರು. ಪ್ರತಿತಿಂಗಳು ವಿದ್ಯಾರ್ಥಿಗಳಲ್ಲಿ ಚರ್ಚಾಗೋಷ್ಠಿಗಳು ಏರ್ಪಡಿಸಲಾಯಿತು. ಅಮರಕೋಶ, ಶ್ಲೋಕಗಳನ್ನು ಕಂಠಪಾಠ ಮಾಡಿಸಲಾಯಿತು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರು, ಮತ್ತು ಯೋಜನಾ ಸಹಾಯಕರು ಪಾಠ ಮಾಡುತ್ತಿರುವರು.

**ಪ್ರವೇಶ ಅರ್ಜಿಗಳನ್ನು ಪಡೆಯುವ ಸ್ಥಳ -**

ಬಿ.ಎ. ಸಂಸ್ಕೃತ ತರಗತಿಯ ಪ್ರವೇಶ ಅರ್ಜಿಗಳನ್ನು ಪ್ರಾಂಶುಪಾಲರು, ಸಂಸ್ಕೃತ ಸಂಜೆ ಕಾಲೇಜು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018. ಈ ವಿಳಾಸದಲ್ಲಿ ಪಡೆಯಬಹುದು.

2014-15ರ ಶೈಕ್ಷಣಿಕ ಬಿ.ಎ. ತರಗತಿಗಳಿಗೆ ಆಹ್ವಾನವನ್ನು ನೀಡಲಾಗುತ್ತಿದೆ. ಸಂಸ್ಕೃತಾಸಕ್ತಿಯುಳ್ಳವರಿಗೆ ಇದೊಂದು ಸುವರ್ಣಾವಕಾಶ. ಆಸಕ್ತಿಯುಳ್ಳವರು ಕೂಡಲೇ ಸಂಸ್ಕೃತ ಸಂಜೆ ಕಾಲೇಜಿನ ಪ್ರಾಂಶುಪಾಲರನ್ನು ಕಾಣಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

www.ksu.ac.in / 9448641523 / 7676202725

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹೊಸ ಹೆಜ್ಜೆ-ನೂತನ ಪಠ್ಯಪುಸ್ತಕಗಳು

ಶಿಕ್ಷಣ ಕ್ಷೇತ್ರದಲ್ಲಿ ಮಹತ್ತಾದ ಗುರಿಯನ್ನು ಸಾಧಿಸಲು ಪಾಠ್ಯವಸ್ತುಗಳು ಅತಿ ಮುಖ್ಯವಾಗಿರುತ್ತವೆ. ಪಾಠ್ಯವಸ್ತುಗಳ ಗಾಂಭೀರ್ಯತೆ ಹಾಗೂ ಗುಣಮಟ್ಟ ಆಯಾ ವಿದ್ಯಾಸಂಸ್ಥೆಯ ಮೌಲ್ಯವನ್ನು ಹೆಚ್ಚಿಸುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಇಟ್ಟ ದಿಟ್ಟ ಹೆಜ್ಜೆ ಪ್ರಶಂಸನೀಯವಾಗಿದೆ.

ಆಧುನಿಕ ಶಿಕ್ಷಣದ ಪಾಠ್ಯಕ್ರಮಕ್ಕೆ ಯಾವುದೇ ರೀತಿಯಲ್ಲಿ ಕಡಿಮೆಯಿಲ್ಲದಂತೆ ರಚನೆಯಾಗಿವೆ. ಕರ್ನಾಟಕ ಸರ್ಕಾರವು ಸಂಸ್ಕೃತ ಪಾಠಶಾಲೆಗಳ ಆಡಳಿತ ನಿರ್ವಹಣೆಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ 2011ರಲ್ಲಿ ''ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವನ್ನು'' ಸ್ಥಾಪಿಸಿತು. ನಿರ್ದೇಶನಾಲಯದ ಅಡಿಯಲ್ಲಿ 243 ಅನುದಾನ ಸಹಿತ ಪಾಠಶಾಲೆಗಳು 250ಕ್ಕೂ ಹೆಚ್ಚು ಅನುದಾನ ರಹಿತ ಪಾಠಶಾಲೆಗಳೂ ಕಾರ್ಯನಿರತವಾಗಿವೆ. ಈ ಪಾಠಶಾಲೆಗಳಲ್ಲಿ ಪ್ರಥಮ-ಕಾವ್ಯ-ಸಾಹಿತ್ಯ ತರಗತಿಗಳು ಒಟ್ಟು ಏಳು ವರ್ಷಗಳ ಪಠ್ಯಕ್ರಮದಲ್ಲಿ ನಡೆಯುತ್ತಿವೆ.

ಸುಮಾರು 30 ವರ್ಷಗಳಿಂದ ಪಾರಂಪರಿಕ ಸಂಸ್ಕೃತ ಶಿಕ್ಷಣವನ್ನು ಈ ಪಾಠಶಾಲೆಗಳಲ್ಲಿ ಬೋಧಿಸಲಾಗುತ್ತಿದ್ದು ನೂತನ ಪಠ್ಯಕ್ರಮದ ಅಗತ್ಯತೆ ವಿಶ್ವವಿದ್ಯಾಲಯದ ಮುಂದಿತ್ತು. ಪಾರಂಪರಿಕ ಸಂಸ್ಕೃತ ಶಿಕ್ಷಣಕ್ಕೆ ಸ್ವಲ್ಪವೂ ಧಕ್ಕೆ ಯಾಗದಂತೆ ಆಧುನಿಕ ಶಿಕ್ಷಣ ಪದ್ಧತಿಗೆ ಹೊಂದುವಂತೆ ಆಮೂಲಾಗ್ರವಾಗಿ ಪಾಠ್ಯಕ್ರಮವನ್ನು ಸಂಸ್ಕೃತಾಸಕ್ತರ ನಿರೀಕ್ಷೆಯಂತೆ ಆಮೂಲಾಗ್ರವಾಗಿ ಪರಿವರ್ತಿಸಲಾಗಿದೆ.

ಸಂಪೂರ್ಣ ಭಾರತದಲ್ಲಿ ಅನೇಕ ಸ್ಥಳಗಳಲ್ಲಿ ಪಾರಂಪರಿಕ ಸಂಸ್ಕೃತ ಶಿಕ್ಷಣವು ಪ್ರಾಥಮಿಕಸ್ತರದಲ್ಲಿ ಬೋಧಿಸಲಾಗುತ್ತಿದ್ದರೂ ಈ ಗುಣಮಟ್ಟದ ಹಾಗೂ ವ್ಯವಸ್ಥಿತವಾದ ಪಾಠ್ಯಕ್ರಮವು ಕೇವಲ ಕರ್ನಾಟಕದಲ್ಲಿಯೇ ಪ್ರಕಾಶಿತವಾಗಿದೆ ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ. ಸಾಮಾನ್ಯವಾಗಿ ಕನ್ನಡ, ಇಂಗ್ಲೀಷ್ ಇತ್ಯಾದಿ ಭಾಗಗಳು ಕೇವಲ ಭಾಷೆಯಾಗಿ ಕಲಿಕೆಯ ವಿಷಯವಾಗಿದೆ. ಆದರೆ ಸಂಸ್ಕೃತವು ಕೇವಲ ಭಾಷಾ ದೃಷ್ಟಿಯಿಂದ ಸಮೃದ್ಧವಾಗಿರುವುದಲ್ಲದೇ ಜ್ಞಾನವಿಜ್ಞಾನಗಳ ಆಗರವಾಗಿದೆ. ಆಯುರ್ವೇದ, ಮನಃಶಾಸ್ತ್ರ, ಯೋಗ, ರಸಾಯನ ಶಾಸ್ತ್ರ, ಗಣಿತ ಇತ್ಯಾದಿ ವೈಜ್ಞಾನಿಕ ವಿಷಯಗಳ ಮೂಲಭೂತ ಸಿದ್ಧಾಂತಗಳು ಹೇರಳವಾಗಿ ಉಪಲಭ್ಯವಾಗುತ್ತವೆ. ಈ ಎಲ್ಲಾ ಭಾರತೀಯ ಯೋಗದಾನಗಳ ಪರಿಚಯವನ್ನು, ಪರಂಪರೆಯ ವೈಶಿಷ್ಟ್ಯವನ್ನು ಮೂಲರೂಪದಲ್ಲಿಯೇ ಪಾಠ್ಯಾಂಶಗಳಾಗಿ ಯೋಜಿತವಾಗಿವೆ.

ಪ್ರಥಮಾ ತರಗತಿಗಳ ಪಾಠ್ಯಪುಸ್ತಕವು ತನ್ನ ಹೆಸರಿಗೆ ಅನ್ವರ್ಥವಾಗುವಂತೆ 'ವಿಭಾ' ಎಂಬ ಹೆಸರಿನಿಂದ ಪ್ರಕಾಶಿತವಾಗಿದೆ. ಕನ್ನಡ, ಇಂಗ್ಲೀಷ್ ಹಾಗೂ ಇತರ ಭಾಷೆಗಳಂತೆ ಸಚಿತ್ರ, ಸುಲಭಗಮ್ಯವಾಗಿ ಭಾಷಾ ಕಲಿಕೆಯ ದೃಷ್ಟಿಯಿಂದ ಅಂದವಾಗಿ ಮುದ್ರಿಸಲ್ಪಟ್ಟಿದೆ. ಕೇವಲ ಪ್ರಥಮಾ ವಿದ್ಯಾರ್ಥಿಗಳಿಗಷ್ಟೇ ಅಲ್ಲದೇ ಸಂಸ್ಕೃತವನ್ನು ಹೊಸದಾಗಿ ಕಲಿಯಬಯಸುವ ಎಲ್ಲಾ ಆಸಕ್ತರಿಗೂ ಈ ಪುಸ್ತಕ ಬಹಳ ಸಹಾಯಕವಾಗಿದೆ. ಲೇಖನ ಹಾಗೂ ಮೌಖಿಕ ಎರಡರ ಅಭ್ಯಾಸವನ್ನೂ ಮಾಡುವಂತೆ ಪರಿಣಿತರು ಬಹಳ ಕಾಲ ಸಮಾಲೋಚಿಸಿ ತಯಾರಿಸಿದ ಪ್ರಯೋಗ ಪುಸ್ತಕ ಇದಾಗಿದೆ. ಮೊದಲ ಮೂರು ವರ್ಷಗಳಲ್ಲಿ ಭಾಷಾ ಕಲಿಕೆಗೆ ಪ್ರಾಮುಖ್ಯತೆ ನೀಡಲಾಗಿದೆ.

ಕಾವ್ಯತರಗತಿಯು ಎರಡನೆಯ ಹಂತ. ಇಲ್ಲಿ ಕೇವಲ ಭಾಷೆಯಷ್ಟೇ ಅಲ್ಲದೆ ಕಾವ್ಯ-ಸಾಹಿತ್ಯಗಳ ಪರಿಚಯವನ್ನೂ ಮಾಡಲಾಗುತ್ತದೆ. ಕಾವ್ಯಗಳ ವ್ಯುತ್ಪತ್ತಿ ಜ್ಞಾನಕ್ಕೆ ಮಹತ್ವ ನೀಡಿ ಶಾಸ್ತ್ರ ಸಹಕಾರಿಯಾದ ವ್ಯಾಕರಣಕ್ಕೆ ಒತ್ತು ನೀಡಲಾಗಿದೆ. ಕಾವ್ಯ ನವನೀತ ಹಾಗೂ ವ್ಯಾಕರಣ ನವನೀತ ಎಂಬ ಎರಡು ಪಾಠ್ಯ ಪುಸ್ತಕಗಳಿವೆ. ಮೊದಲನೆಯ ಪುಸ್ತಕದಲ್ಲಿ ಗದ್ಯ, ಪದ್ಯ ಮತ್ತು ದೃಶ್ಯ ಎಂದು ಮೂರು ವಿಭಾಗಗಳಿವೆ. ಪ್ರತಿಯೊಂದು ಪಾಠಕ್ಕೂ ವಿವರಣೆ, ಪ್ರಶ್ನಭಾಗ, ಟಿಪ್ಪಣಿಗಳನ್ನು ನೀಡಿ ಸ್ವಯಂ ಓದುವಂತೆ ರಚಿಸಲಾಗಿದೆ. 'ವ್ಯಾಕರಣ ನವನೀತಂ' ಪುಸ್ತಕವು ಎಲ್ಲಾ ಸಂಸ್ಕೃತ ವ್ಯಾಕರಣ ಕಲಿಯುವವರಿಗೆ ದಾರಿದೀಪವಾಗಿದೆ. ಅನೇಕ ವರ್ಷಗಳ ಕಾಲ ಪಾಠನ ಅನುಭವದಿಂದ ವಿದ್ಯಾರ್ಥಿಗಳ ಮಟ್ಟವನ್ನು ಅರ್ಥೈಸಿಕೊಂಡು ಸರಳ ಹಾಗೂ ಸುಲಭವಾಗಿ ಅರ್ಥವಾಗುವಂತೆ ರಚಿಸಲ್ಪಟ್ಟ

ಈ ಪುಸ್ತಕವು ರಚನಾಕಾರರಾದ ವಿದ್ವಾನ್ ಮುರಲೀಧರರವರ ನಿರಂತರ ಪರಿಶ್ರಮವನ್ನು ಎತ್ತಿಹಿಡಿದೆ.

ಸಾಹಿತ್ಯ ತರಗತಿಗಳ ಪಾಠ್ಯವು ಪಾರಂಪರಿಕ ಶಾಸ್ತ್ರಪ್ರವೇಶಾಪೇಕ್ಷಿತ ಜ್ಞಾನದ ಕಲಿಕೆಯ ದೃಷ್ಟಿಯಿಂದ ಸಾಮಾನ್ಯ ಶಿಕ್ಷಣಕ್ಕೆ ಪರ್ಯಾಯವಾಗಿ ರಚಿಸಲಾಗಿದೆ. ಪ್ರತಿಯೊಂದು ಪುಸ್ತಕವೂ ಅರ್ಥಗಂಭೀರವಾಗಿದ್ದು, ಅರ್ಥಸಡಿಲವಾಗದಂತೆ ವಿಸ್ತಾರವಾದ ಟಿಪ್ಪಣಿಯಿಂದ ಕೂಡಿದ್ದು ಪುಸ್ತಕದ ಘನತೆಯನ್ನು ಹೆಚ್ಚಿಸಿವೆ. ಹಿಂದಿನ, ಐತಿಹಾಸಿಕ, ಆಧುನಿಕ - ಹೀಗೆ ಎಲ್ಲಾ ರೀತಿಯ ಗದ್ಯ ಪದ್ಯಗಳ ಪರಿಚಯವನ್ನೂ ಮಾಡಲಾಗಿದೆ. ಸಾಹಿತ್ಯ ಸೋಪಾನ-1, 2ರಲ್ಲಿ ಪ್ರತಿಯೊಂದು ಪಾಠಕ್ಕೂ ಪೀಠಿಕೆ (ಹಿನ್ನೆಲೆ), ನೀಡಿದ್ದು ಕವಿಕಾವ್ಯದ ವಿಸ್ತಾರ ಪರಿಚಯ, ಕಥಾವಸ್ತು/ಪಾಠಸಾರ/ಆಶಯ, ಮೂಲ-ಮೂಲಕ್ಕೆ ವಿಸ್ತಾರವಾದ ಟಿಪ್ಪಣಿ, ಟಿಪ್ಪಣಿಯಲ್ಲಿ ವಿಶೇಷಾಂಶ, ವ್ಯಾಕರಣ ವಿಶೇಷಗಳು ಇತ್ಯಾದಿ ವಿವರಣೆ-ಇದರಿಂದ ಶಿಕ್ಷಕರಿಗೆ ಬೋಧಿಸಲು ಬಹಳ ಅನುಕೂಲ ಮಾಡಿಕೊಟ್ಟಿವೆ. ತರ್ಕಸೋಪಾನಕ್ಕೆ ವಿದ್ವಾನ್ ಹರಿದಾಸ ಭಟ್ಟರ ವ್ಯಾಖ್ಯಾನ, ವಿಷಯದ ಕೊನೆಯಲ್ಲಿ ಪ್ರಶ್ನೆಗಳು-ಕೊನೆಯಲ್ಲಿ ಸರಳವಾದ ಟಿಪ್ಪಣಿ - ಹೀಗೆ ನೀಡಲಾಗಿದೆ. ಸರ್ವ ಶಾಸ್ತ್ರೋಪಕಾರಿಯಾದ ತರ್ಕ ಸಂಗ್ರಹವನ್ನು ಎಲ್ಲಾ ಸಂಸ್ಕೃತಾಸಕ್ತರೂ ಓದುವಂತೆ, ಅರ್ಥಮಾಡಿಕೊಳ್ಳುವಂತೆ ರಚಿಸಲಾಗಿದೆ. ವ್ಯಾಕರಣ ಸೋಪಾನವನ್ನು ಇದೇ ಮಾದರಿಯಲ್ಲಿ ರಚಿಸಲಾಗಿದೆ. ಈ ಮಹತ್ಕಾರ್ಯದಲ್ಲಿ ಡಾ।। ವಿಶ್ವಾಸ್, ಡಾ।। ಲಕ್ಷ್ಮೀನಾರಾಯಣ ಭಟ್, ಡಾ।। ಹರಿದಾಸ ಭಟ್, ಡಾ।। ತಿರುಮಲಾಚಾರ್ಯ ಕುಲಕರ್ಣಿ ಮತ್ತು ಇತರ ವಿದ್ವಾಂಸರ ಅವಿರತ ಪರಿಶ್ರಮವಿದೆ. ಬೇರೆಲ್ಲ ಪಠ್ಯಪುಸ್ತಕಗಳಲ್ಲಿ ಅಭ್ಯಾಸಕ್ಕಾಗಿ ಹಲವು ಸಹಾಯಕ ಗ್ರಂಥಗಳ ಅಪೇಕ್ಷೆ ಇರುತ್ತದೆ. ಆದರೆ ಈ ಪಾಠ್ಯಗಳಿಗೆ ವಿಶ್ಲೇಷಣಾತ್ಮಕವಾದ ವಿಸ್ತಾರವಾದ ವಿವರಣೆ ಅರ್ಥಸಡಿಲ ವಾಗದಂತೆ ನೀಡಿರುವುದರಿಂದ ಪಾಠ್ಯಪುಸ್ತಕಗಳು ಸ್ವತಂತ್ರವಾಗಿ ವ್ಯಾಖ್ಯಾನ ಮಾಡಬಲ್ಲವಾಗಿವೆ.

ಪ್ರಥಮಾ-ಕಾವ್ಯ ತರಗತಿಗಳು ಭಾಷೆ ಹಾಗೂ ಕಾವ್ಯವ್ಯುತ್ಪತ್ತಿಯ ಕಲಿಕೆಯ ದೃಷ್ಟಿಯಿಂದ ಹೆಚ್ಚು ಸಾಹಿತ್ಯಕ್ಕೆ ಮಹತ್ವ ನೀಡಿದೆ. ಆದರೆ ಸಾಹಿತ್ಯ ತರಗತಿಯಲ್ಲಿ ಪಾರಂಪರಿಕ ಸಂಸ್ಕೃತ ಶಾಸ್ತ್ರಪ್ರವೇಶಕ್ಕೆ ಬೇಕಾದ ಅರ್ಹತೆಯನ್ನು ಹೊಂದಲು ಬೇಕಾದ ಪಾಠ್ಯವಿರುತ್ತದೆ. ಸಂಸ್ಕೃತ ಶಾಸ್ತ್ರಗಳು ವ್ಯಾವಹಾರಿಕ ಜಗತ್ತಿನಲ್ಲಿ ಏನೂ ಲಾಭವಿಲ್ಲದ ಅನುಪಯುಕ್ತ ಗ್ರಂಥಗಳಾಗಿ ಹೊರಗಣ್ಣಿಗೆ ಕಾಣಲ್ಪಟ್ಟರೂ ವಸ್ತುತಃ ಅವುಗಳೇ ಭಾರತೀಯ ಸಂಸ್ಕೃತಿಯ ಮೂಲಸ್ರೋತಗಳಾಗಿವೆ. ಅವುಗಳ ಅಧ್ಯಯನದಿಂದ ಭಾರತೀಯತೆಯ ಹಲವು ಮುಖಗಳು ಪರಿಚಯವಾಗುವುದಷ್ಟೇ ಅಲ್ಲದೇ ಬೇರೆಲ್ಲಾ ದೇಶಗಳ ಸಂಸ್ಕೃತಿಗಿಂತ ವಿಶಿಷ್ಟವಾಗಿ ಕಾಣುತ್ತದೆ. ಹಾಗೂ ಈ ಅಧ್ಯಯನಕ್ಕೆ ಪ್ರವೇಶ ಅಗತ್ಯ. ಪ್ರವೇಶವಿಲ್ಲದೇ ಕೇವಲ ಓದುವಿಕೆಯಿಂದ ಮಹರ್ಷಿಗಳ ಅಂತರಾಳದ ಸಂವೇದನೆಯು ಅರ್ಥವಾಗುವುದಿಲ್ಲ. ಗುರುಮುಖಾಧ್ಯಯನಕ್ಕೆ ಅಷ್ಟೊಂದು ಪ್ರಾಮುಖ್ಯತೆಯಿರುವುದು ಈ ದೃಷ್ಟಿಯಿಂದಲೇ.

ಸಾಹಿತ್ಯಿಕ ದೃಷ್ಟಿಯಿಂದಲೂ ಸಂಸ್ಕೃತ ಕಾವ್ಯಗಳಲ್ಲಿನ ಹಿಂದಿನ ಶ್ರೀಮಂತಿಕೆಯನ್ನು ಆಧುನಿಕ ಕಾವ್ಯಗಳಲ್ಲಿಯೂ ನೋಡಬಹುದಾಗಿದೆ. ಆಧುನಿಕ ಕವಿಗಳಿಂದ ರಚಿಸಲ್ಪಟ್ಟ ಕಾವ್ಯಗಳು ಹಿಂದಿನ ಶ್ರೇಷ್ಠ ಕವಿಕಾವ್ಯಗಳ ಸಾಲಿನಲ್ಲಿ ನಿಲ್ಲುವಂತೆ ರಚಿತವಾಗಿವೆ. ಡಾ।। ಶ್ರೀಧರ ವರ್ಣೇಕರ, ವಿದ್ವಾನ್ ರಾಮಚಾರ್ಯ ಗಲಗಲಿ ಮೊದಲಾದವರ ಗದ್ಯ, ಪದ್ಯ, ನಾಟಕಗಳು ಆಧುನಿಕ ಸಂಸ್ಕೃತವನ್ನು ಪರಿಚಯಿಸುತ್ತವೆ.

ಸಾಹಿತ್ಯವನ್ನು ಸವಿಯುವ ಸಹೃದಯರಿಗೆ, ಜಿಜ್ಞಾಸುಗಳಿಗೆ, ಆಸಕ್ತರಿಗೆ ಇದು ತೆರೆದ ಪುಸ್ತಕದಂತಿದೆ. ಆದ್ದರಿಂದ ಎಲ್ಲರೂ ಈ ಪುಸ್ತಕಗಳ ಲಾಭವನ್ನು ಪಡೆಯ ಬಹುದಾಗಿದೆ.

**ಉದಯನ ಹೆಗಡೆ**
**ಶ್ರುತಿ ಎಚ್.ಕೆ.**
**ಶಕುಂತಲಾ ಭಟ್**

## ಭಾರತ ಸರ್ಕಾರದಿಂದ ನಿಯುಕ್ತಿ



**ಡಾ. ಶ್ರೀನಿವಾಸ ವರಖೇಡಿ, ಇವರು ನವದೆಹಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಅಧೀನವಾದ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ರಾಷ್ಟ್ರೀಯ ಅನುದಾನ ಸಮಿತಿಯ ತಜ್ಞ ಸದಸ್ಯರಾಗಿ ಭಾರತ ಸರ್ಕಾರದಿಂದ ನಿಯುಕ್ತಿಗೊಂಡಿದ್ದಾರೆ.**

# ಪ್ರೊ. ಎಂ.ಹಿರಿಯಣ್ಣ ಗ್ರಂಥ ಪುರಸ್ಕಾರ ಸಮಾರಂಭ (2013)

> ಸಂಸ್ಕೃತವನ್ನು ಕೇವಲ ಒಂದು ಸಮುದಾಯ ಭಾಷೆಯನ್ನಾಗಿ ನೋಡಬಾರದು. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿರುವ ಯುವಕರು ಆಧುನಿಕ ತಂತ್ರ ಜ್ಞಾನದ ಸಹಾಯದಿಂದ ಸಂಸ್ಕೃತವನ್ನು ಉಳಿಸಲು ಪ್ರಯತ್ನಿಸಬೇಕು.

ದಿನಾಂಕ 26.05.2013, ಭಾನುವಾರದಂತೆ ಬೆಳಿಗ್ಗೆ 10.30 ಗಂಟೆಗೆ ಪ್ರೊ. ಎಂ. ಹಿರಿಯಣ್ಣ ಗ್ರಂಥ ಪುರಸ್ಕಾರ ಪ್ರದಾನ ಸಮಾರಂಭವು ಶ್ರೀ ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಂಗಳೂರಿನಲ್ಲಿ ನಡೆಯಿತು. ಒಟ್ಟು ಐದು ವಿದ್ವಾಂಸರುಗಳಿಗೆ ಈ ಗ್ರಂಥಪುರಸ್ಕಾರವನ್ನು ನೀಡಿ ಅವರನ್ನು ಗೌರವಿಸಲಾಯಿತು. ವಿದ್ವಾನ್ ಆರಯರ್ ಶ್ರೀರಾಮಶರ್ಮಾರವರ ಗದಾಧರೌದಾರ್ಯಮ್ ಎಂಬ ನಾಟಕ ಸಾಹಿತ್ಯ, ಪ್ರೊ. ಎಂ.ಎ. ಹೆಗಡೆಯವರ ಸಿದ್ಧಾಂತಬಿಂದುರವರ ಅನುವಾದ ಸಾಹಿತ್ಯ, ವಿದ್ವಾನ್ ಉಮಾಕಾಂತ್ ಭಟ್ಟರವರ ಭೃಂಗಮಾರ್ಗವೆಂಬ ಕಾವ್ಯ ಸಾಹಿತ್ಯ, ಡಾ|| ನಾಗರತ್ನಾ ಹೆಗಡೆಯವರ ಮನಃ ತತ್ತ್ವಶಮನಂ ಚ ಎಂಬ ಅನುವಾದ ಸಾಹಿತ್ಯ ಹಾಗೂ ಡಾ|| ವೆಂಕಟರಮಣ ಭಟ್ಟರವರ ರಾಣಾಯನೀಯ ಸಾಮಸಂಹಿತ, ಗ್ರಂಥ ಸಂಪಾದನೆಗೆ ಈ ಪುರಸ್ಕಾರವನ್ನು ನೀಡಲಾಯಿತು.

ಪ್ರೊ. ಎಂ. ಹಿರಿಯಣ್ಣ ಗ್ರಂಥ ಪುರಸ್ಕಾರವನ್ನು ನೀಡಲು ಆಗಮಿಸಿದ ನಿವೃತ್ತ ಪೋಲೀಸ್ ಮಹಾನಿರ್ದೇಶಕರು ಹಾಗೂ ಖ್ಯಾತ ಸಂಸ್ಕೃತ ವಿದ್ವಾಂಸರಾದಂತಹ ಡಾ|| ಪಿ.ಎಸ್. ರಾಮಾನುಜಮ್, ಐ.ಪಿ.ಎಸ್.ರವರು ತಮ್ಮ ಭಾಷಣದಲ್ಲಿ ''ಸಂಸ್ಕೃತ ಭಾಷೆ ಕೇವಲ ಪೌರೋಹಿತ್ಯಕ್ಕೆ ಸೀಮಿತವಾಗಬಾರದು. ಇತರ ಭಾಷೆ ಹಾಗೂ ವಿಷಯಗಳೊಂದಿಗೆ ಬಳಸುವ ಮೂಲಕ ಸಂಸ್ಕೃತ ಭಾಷೆಯನ್ನು ಬೆಳೆಸಬೇಕು. ಸಂಸ್ಕೃತವನ್ನು ಕೇವಲ ಒಂದು ಸಮುದಾಯ ಭಾಷೆಯನ್ನಾಗಿ ನೋಡಬಾರದು. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿರುವ ಯುವಕರು ಆಧುನಿಕ ತಂತ್ರಜ್ಞಾನದ ಸಹಾಯದಿಂದ ಸಂಸ್ಕೃತವನ್ನು ಉಳಿಸಲು ಪ್ರಯತ್ನಿಸಬೇಕು'' ಎಂದು ತಿಳಿಸಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ''ಪ್ರೊ. ಎಂ. ಹಿರಿಯಣ್ಣನವರು ಕರ್ನಾಟಕದ ಮೊಟ್ಟ ಮೊದಲ ಸಂಸ್ಕೃತ ಹಾಗೂ ದರ್ಶನಶಾಸ್ತ್ರದ ಪ್ರಾಧ್ಯಾಪಕರಾಗಿದ್ದು ತಮ್ಮ ಗ್ರಂಥರಚನೆ ಹಾಗೂ ಅಧ್ಯಾಪನದ ಮೂಲಕ ಅವರು ನೀಡಿದ ಕೊಡುಗೆ ಅನನ್ಯವಾದುದು. ಇವರ ಹೆಸರಿನಲ್ಲಿ 2011ರಿಂದ ಗ್ರಂಥ ಪುರಸ್ಕಾರವನ್ನು ನೀಡಲಾಗುತ್ತಿದೆ. ಈ ಬಾರಿ ಪುರಸ್ಕಾರಕ್ಕೆ ಆಯ್ಕೆಯಾಗಿರುವ ಗ್ರಂಥಗಳು ಸಾಹಿತ್ಯ ಕ್ಷೇತ್ರದ ಗಟ್ಟಿ ಕಾಳುಗಳಾಗಿವೆ'' ಎಂದು ನುಡಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಾಮುದ್ರ ಫೌಂಡೇಶನ್ನಿನ ಅಧ್ಯಕ್ಷರು ಹಾಗೂ ಮಂಗಳೂರು ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ಸದಸ್ಯರಾದ ಪ್ರೊ. ಕೆ. ಈ. ರಾಧಾಕೃಷ್ಣರವರು ತಮ್ಮ ಅತಿಥಿ ಭಾಷಣದಲ್ಲಿ ''ಕಳೆದ ಮೂರು ವರ್ಷಗಳಲ್ಲಿ ವಿಶ್ವವಿದ್ಯಾಲಯದಿಂದ ಸಾಕಷ್ಟು ಉತ್ತಮ ಕೆಲಸಗಳಾಗಿವೆ. ಈ ಪರಂಪರೆಯನ್ನು ಮುಂದಿನವರೂ ಮುಂದುವರಿಸಬೇಕು'' ಎಂದರು.

ಪುರಸ್ಕಾರವನ್ನು ಸ್ವೀಕರಿಸಿದ ಹಿರಿಯ ಸಂಸ್ಕೃತ ವಿದ್ವಾಂಸ ಆರಯರ್ ಶ್ರೀ ರಾಮಶರ್ಮಾರವರು ತಮ್ಮ ಅನುಭವವನ್ನು ಹೇಳುತ್ತಾ 'ಸಂಸ್ಕೃತ ಗ್ರಂಥಗಳ ಸಂರಕ್ಷಣೆಗೆ ಸಂಸ್ಕೃತ ವಿಶ್ವವಿದ್ಯಾಲಯ ಮುಂದಾಗಬೇಕು. ಸಂಸ್ಕೃತ ಗ್ರಂಥಗಳನ್ನು ಸಂಪಾದಿಸಿ ಅವುಗಳನ್ನು ಪ್ರಕಟಿಸುವ ಕೆಲಸವನ್ನು ವಿಶ್ವವಿದ್ಯಾಲಯ ಮಾಡಬೇಕು' ಎಂದು ತಿಳಿಸಿದರು. ಈ ಪುರಸ್ಕಾರವು 10 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ವೈ ಸಿದ್ದೇಗೌಡರು ಸ್ವಾಗತ ಭಾಷಣವನ್ನು ಮಾಡಿದರು. ಪ್ರೊ. ಶ್ರೀನಿವಾಸ ವರಖೇಡಿಯವರು ವಂದನಾರ್ಪಣೆಯನ್ನು ಮಾಡಿದರು.

ವರದಿ : **ತೇಜಸ್ವಿನಿ ಡಿ.**
ಯೋಜನಾ ಸಹಾಯಕರು

# ಪ್ರೊ. ಎಂ. ಹಿರಿಯಣ್ಣ ಗ್ರಂಥ ಪುರಸ್ಕಾರ ಸಮಾರಂಭ (2014)



ದಿನಾಂಕ 6-1-2014, ಸೋಮವಾರದಂದು ಸಂಜೆ 5.30 ಗಂಟೆಗೆ, ಪ್ರೊ. ಹಿರಿಯಣ್ಣ 4ನೇ ಗ್ರಂಥಪುರಸ್ಕಾರ ಸಮಾರಂಭವು ಶ್ರೀಕೃಷ್ಣರಾಜ ಪರಿಷನ್ಮಂದಿರ ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ ಬೆಂಗಳೂರಿನಲ್ಲಿ ನಡೆಯಿತು. ಐದು ವಿದ್ವಾಂಸರುಗಳಿಗೆ ಈ ಗ್ರಂಥ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

ಡಾ॥ ಗಣೇಶ ಈಶ್ವರಭಟ್ಟರವರ ಜಗದ್ಗುರು ವಿಜಯಂ ಎಂಬ ಕಾವ್ಯಸಾಹಿತ್ಯ, ವಿದ್ವಾನ್ ಎಚ್.ಎಂ. ಸುಧೀರರವರ ರಕ್ತರಾಂಕವ ಎಂಬ ಕಥಾಸಾಹಿತ್ಯ, ಡಾ॥ ಶ್ರೀನಿಧಿ ವಿ. ಅವರ ಗೀತಾಗೂಢಾರ್ಥ ಚಂದ್ರಿಕಾ ಎಂಬ ಸಂಪಾದನ ಸಾಹಿತ್ಯ, ಡಾ॥ ಶಾಂತಲಾರವರ ಅಗಸ್ತ್ಯ ಎಂಬ ಅನುವಾದ ಸಾಹಿತ್ಯ, ಹಾಗೂ ವಿದ್ವಾನ್ ಅಮೈ ಅನಂತಕೃಷ್ಣ ಭಟ್ಟರವರ ಪ್ರಾತಿಶಾಖ್ಯಪ್ರಕಾಶ ಎಂಮ ಅನುವಾದ ಸಾಹಿತ್ಯ, ಇವುಗಳಿಗೆ ಈ ಪುರಸ್ಕಾರವನ್ನು ನೀಡಲಾಯಿತು.

ಪ್ರೊ. ಎಂ. ಹಿರಿಯಣ್ಣ ಗ್ರಂಥಪುರಸ್ಕಾರವನ್ನು ಪ್ರದಾನ ಮಾಡಲು ಆಗಮಿಸಿದ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ನಿವೃತ್ತ ಪ್ರಾಧ್ಯಾಪಕರಾದ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಹಂಪ ನಾಗರಾಜಯ್ಯನವರು - ''ಪ್ರಾತಸ್ಮರಣೀಯರಾದ ಪ್ರೊ. ಹಿರಿಯಣ್ಣನವರ ಹೆಸರಿನಲ್ಲಿ ಪುರಸ್ಕಾರ ಪ್ರದಾನ ಮಾಡುತ್ತಿರುವುದು ಅತ್ಯಂತ ಸಂತೋಷಕರ ವಿಷಯ. ಸಂಸ್ಕೃತ ಹಾಗು ಪ್ರಾಕೃತ ಭಾಷೆಯಿಂದ ಕನ್ನಡವು ಸಮೃದ್ಧಿಯನ್ನು ಪಡೆದುಕೊಂಡಿದೆ. ಸಂಸ್ಕೃತ ಹಾಗು ಕನ್ನಡ ಭಾಷೆಗಳು ಪರಸ್ಪರ ಪೂರಕ-ಪೋಷಕವಾಗಿ ನಡೆದರೆ ಸಮಾಜಕ್ಕೆ ಶ್ರೇಯಸ್ಸು'' ಎಂದು ನುಡಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರೊ. ಎಂ.ಎ. ಲಕ್ಷ್ಮೀತಾತಾಚಾರ್ಯರು ಅತಿಥಿ ಭಾಷಣದಲ್ಲಿ ''ಗುರು ತನ್ನ ಜ್ಞಾನದಿಂದ ಶಿಷ್ಯನಿಗೆ ಜನ್ಮಕೊಡುತ್ತಾನೆ. ಅಂತಹ ಜ್ಞಾನ ಪರಂಪರೆಯಿಂದ ಶ್ರೀ ಹಿರಿಯಣ್ಣನವರು ಬಂದವರು. ಸಂಸ್ಕೃತ-ಕನ್ನಡ-ಹಾಗೂ ವಿಶೇಷವಾಗಿ ದರ್ಶನಶಾಸ್ತ್ರದಲ್ಲಿ ಅವರ ಕೊಡುಗೆ ವಿಶಿಷ್ಟವಾಗಿದೆ'' ಎಂದು ಹೇಳಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ''ಪ್ರೊ. ಹಿರಿಯಣ್ಣನವರ ಸೃಜನ ಶೀಲವಾದ ಪ್ರತಿಭೆ, ಗುರುವಿನಲ್ಲಿಯ ಅಪಾರ ಶ್ರದ್ಧೆಯನ್ನು ಹೊಂದಿದವರು. ಸಂಸ್ಕೃತ ಭಾಷೆ ಅಂತದೃಷ್ಟಿಯನ್ನು ಕೊಡುತ್ತದೆ. ಅಂತಃದೃಷ್ಟಿಯಿಲ್ಲದೇ ಬಹಿದೃಷ್ಠಿ ನಿಷ್ಪ್ರಯೋಜಕವಾದದು. ಅಂತಹ ಒಳನೋಟವನ್ನು ಹೊಂದಿದವರು ಪ್ರೊ. ಹಿರಿಯಣ್ಣನವರು. ಇಂತಹ ಹಿರಿಯ ವಿದ್ವಾಂಸರ ಹೆಸರಿನಲ್ಲಿ ಪುರಸ್ಕಾರವನ್ನು ಕೊಡುವುದು ವಿಶ್ವವಿದ್ಯಾಲಯಕ್ಕೆ ಹೆಮ್ಮೆಯೆನಿಸುತ್ತದೆ'' ಎಂದು ನುಡಿದರು.

ಪುರಸ್ಕಾರವನ್ನು ಸ್ವೀಕರಿಸಿದ ಹಿರಿಯ ಸಂಸ್ಕೃತ ವಿದ್ವಾಂಸರಾದ ವಿದ್ವಾನ್ ಅಮೈ ಅನಂತಕೃಷ್ಣ ಭಟ್ಟರು, ತಮ್ಮ ಅನುಭವವನ್ನು ವ್ಯಕ್ತಪಡಿಸಿ ''ನಾವು ಮಾಡಿದ ಈ ಸಾರಸ್ವತ ಸೇವೆಯನ್ನು ವಿಶ್ವವಿದ್ಯಾಲಯ ಗುರುತಿಸಿದ್ದು ಹಾಗು ನಮ್ಮ ಜವಾಬ್ದಾರಿಯನ್ನು ಕೂಡ ಹೆಚ್ಚಿಸಿದೆ'' ಎಂದು ನುಡಿದರು. ಈ ಪುರಸ್ಕಾರವು ಹತ್ತುಸಾವಿರ ನಗದು ಹಾಗು ಫಲಕವನ್ನು ಒಳಗೊಂಡಿದೆ.

ವಿಶ್ವವಿದ್ಯಾಲಯದ ಶಾಸ್ತ್ರನಿಕಾಯದ ಡೀನರಾದ ಪ್ರೊ. ಶ್ರೀನಿವಾಸ ವರಖೇಡಿಯವರು ಸ್ವಾಗತ ಹಾಗು ಪರಿಚಯ ಭಾಷಣವನ್ನು ಮಾಡಿದರು. ನಿರ್ದೇಶಕರಾದ ಪ್ರೊ. ಗಿರೀಶ್‌ಚಂದ್ರರವರು ವಂದನಾರ್ಪಣೆಯನ್ನು ಮಾಡಿದರು.

ವರದಿ : **ಡಾ. ಕೆ.ವಿ. ಜೋಷಿ**

# 2013-14ನೇ ಸಾಲಿನ ವಿದ್ಯಾವಾರಿಧಿ (ಪಿಎಚ್.ಡಿ) ಮತ್ತು ವಿಶಿಷ್ಟಾಚಾರ್ಯ (ಎಂ.ಫಿಲ್) ಕೋರ್ಸ್‌ವರ್ಕ್ ವರದಿ

ವರದಿ : **ಡಾ. ಶರಚ್ಚಂದ್ರ ಸ್ವಾಮಿ**

ದೇಶದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಸಂಶೋಧನಾ ವಿಧಾನಗಳಲ್ಲಿ ಹಲವಾರು ನೂತನ ಬದಲಾವಣೆಗಳನ್ನು ಯು.ಜಿ.ಸಿ.ಯು 2009ನೇ ಸಾಲಿನಿಂದ ಜಾರಿಗೆ ತಂದಿದೆ. ವಿಶ್ವವಿದ್ಯಾಲಯಗಳ ವಿವಿಧ ವಿಭಾಗಗಳಲ್ಲಿ ಜರುಗುತ್ತಿರುವ ಸಂಶೋಧನೆಗಳಲ್ಲಿ ಹೆಚ್ಚಿನ ಗುಣವತ್ತತೆಯನ್ನು ತರಲು ಹೊಸ ಪ್ರಸ್ತಾಪವನ್ನು ಯು.ಜಿ.ಸಿ.ಯು ಜಾರಿಗೊಳಿಸಿದೆ. ಈ ಪ್ರಸ್ತಾಪದನು ಗುಣವಾದ ಒಂದು ಅಂಶವೇ ಸಂಶೋಧನಾಪಥದಲ್ಲಿ ಮುನ್ನಡಿಯಿಡುವ ವಿದ್ಯಾರ್ಥಿಗಳಿಗೆ ಕೋರ್ಸ್‌ವರ್ಕ್ ಅಥವಾ ಷಾಣ್ಮಾಸಿಕ ಸತ್ರದ ಆಯೋಜನೆ.

2009ರಲ್ಲಿ ಪ್ರಾರಂಭವಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಬೋಧನೆಯ ಜೊತೆಜೊತೆಗೆ ಸಂಶೋಧನೆಯನ್ನೂ ಮುಖ್ಯಗುರಿಯಾಗಿ ಹೊಂದಿದೆ. ಸನ್ಮಾನ್ಯ ಕುಲಪತಿಗಳಾದ ಡಾ|| ಮಲ್ಲೇಪುರಂ ಜಿ. ವೆಂಕಟೇಶ್ ಅವರ ಸದಾಶಯ ಮತ್ತು ಮಾರ್ಗದರ್ಶಕತ್ವದಂತೆ, ಇದು ಸಂಶೋಧನೆಯನ್ನೇ ಕೇಂದ್ರೀಕರಿಸಿಕೊಂಡಿರುವ ವಿದ್ಯಾಕೇಂದ್ರವಾಗಿದೆ. ಈ ಹಿನ್ನೆಲೆಯಲ್ಲಿ 2012-13ನೇ ಶೈಕ್ಷಣಿಕ ಸಾಲಿನಿಂದ ಎಂ.ಫಿಲ್. ತರಗತಿಯನ್ನು ಮತ್ತು 2013-14ನೇ ಸಾಲಿನಿಂದ ಪಿ.ಎಚ್.ಡಿ. ತರಗತಿಯನ್ನು ವಿಶ್ವವಿದ್ಯಾಲಯವು ಆರಂಭಿಸಿತು. ಯು.ಜಿ.ಸಿ.ಯ ಮಾರ್ಗದರ್ಶಿ ಸೂತ್ರದನುಸಾರ ಕೋರ್ಸ್‌ವರ್ಕ್‌ನ ಪಠ್ಯಕ್ರಮ, ಪರೀಕ್ಷಾಪದ್ಧತಿ, ಬೋಧನಾ ವಿಧಾನ ಇತ್ಯಾದಿ ಸಂಗತಿಗಳನ್ನು ನಿರ್ಧರಿಸುವುದಕ್ಕಾಗಿ ವಿವಿಧ ವಿದ್ವಾಂಸರನ್ನೊಳಗೊಂಡಿದ್ದ ಅಧ್ಯಯನ ಮಂಡಳಿಯೊಂದನ್ನು ರೂಪಿಸಲಾಯಿತು. ಈ ಮಂಡಳಿಯು ವಿದ್ವಾಂಸರಾದ ಪ್ರೊ. ಶ್ರೀನಿವಾಸ ವರಖೇಡಿ, ಪ್ರೊ. ಗಿರೀಶ್ಚಂದ್ರ, ಡಾ|| ಎಂ. ಶಿವಕುಮಾರಸ್ವಾಮಿ, ಡಾ|| ವಿರೂಪಾಕ್ಷ ಜಡ್ಡಿಪಾಲ್, ಡಾ|| ಎಸ್ ಜಗನ್ನಾಥ್ ಅವರನ್ನು ಒಳಗೊಂಡಿತ್ತು. ಮಂಡಳಿಯು ಯುಜಿಸಿಯ ಪ್ರಸ್ತಾಪ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿರುವ ಪಠ್ಯಕ್ರಮಗಳನ್ನು ಗಮನದಲ್ಲಿರಿಸಿಕೊಂಡು ಈ ಕೆಳಗಿನಂತೆ ನೂತನ ಪಠ್ಯಕ್ರಮವನ್ನು ರೂಪಿಸಿತು -

**ಪತ್ರಿಕೆ 1 :** ಅನುಸಂಧಾನ ವಿಧಾನ ಹಾಗೂ ಸೂಚನಾ ತಂತ್ರಗಳ ಅನುಪ್ರಯೋಗ (Research Methodology and Application of I.T. of Research)

**ಪತ್ರಿಕೆ 2 :** ಹಸ್ತಪ್ರತಿಶಾಸ್ತ್ರ / ಗ್ರಂಥಸಂಪಾದನ ಶಾಸ್ತ್ರ, ಪಾಠಸಮಾಲೋಚನೆ ಹಾಗೂ ವಿಮರ್ಶಾತ್ಮಕ ಅಧ್ಯಯನ (Manuscriptology and Textual Criticism)

**ಪತ್ರಿಕೆ 3 :** ಶಾಸ್ತ್ರ ಶಿಕ್ಷಣ ಪದ್ಧತಿ (Methods of Teaching Shastras)

ಜುಲೈ 2013ರಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಪ್ರವೇಶ ಪರೀಕ್ಷೆಯೊಂದನ್ನು ನಡೆಸಿ, ಅರ್ಹ ವಿದ್ಯಾರ್ಥಿಗಳನ್ನು ಆರಿಸಲಾಯಿತು. ಸಂಶೋಧನೆಗಾಗಿ ಆಯ್ಕೆಯಾದ ವಿದ್ಯಾರ್ಥಿಗಳು ಭಾಷಾ ವಿಜ್ಞಾನ, ವೇದ-ವೇದಾಂಗ, ಸಾಹಿತ್ಯ, ವೇದಾಂತ, ಆಯುರ್ವೇದ, ಶಾಸ್ತ್ರಗಳು, ಗಣಕ ಇತ್ಯಾದಿ ವಿವಿಧ ಕ್ಷೇತ್ರಗಳಿಗೆ ಸೇರಿದವರಾಗಿದ್ದರು. ವಿದ್ಯಾರ್ಥಿಗಳು ಪದವಿಗಾಗಿ ಸಂಶೋಧನೆಯನ್ನು ಆರಂಭಿಸುವ ಮೊದಲು ಕಡ್ಡಾಯವಾಗಿ ಭಾಗವಹಿಸಲೇಬೇಕಾಗಿದ್ದ ಈ ಕೋರ್ಸ್‌ವರ್ಕ್ ತರಗತಿಗಳು ಆಗಸ್ಟ್ 2013ರಿಂದ ಆರಂಭವಾಗಿ ಜನವರಿ 2014ರವರೆಗೆ ನಡೆದವು. ಎಂ.ಫಿಲ್. ತರಗತಿಯ 11 ಮತ್ತು ಪಿ.ಎಚ್.ಡಿ. ತರಗತಿಯನ್ನು 24 ವಿದ್ಯಾರ್ಥಿಗಳು ಕೋರ್ಸ್ ವರ್ಕ್ ತರಗತಿಗಳಲ್ಲಿ ಭಾಗವಹಿಸಿದ್ದರು. ಉನ್ನತಾಧ್ಯಯನ ವನ್ನು ಮುಗಿಸಿ ಸಂಶೋಧನಾಕ್ಷೇತ್ರಕ್ಕೆ ಹೆಜ್ಜೆಯಿಡುವ ವಿದ್ಯಾರ್ಥಿಗಳಿಗೆ ಅತ್ಯಗತ್ಯವಾದ ಪೂರ್ವತರಬೇತಿಯಂತೆ ಈ ಷಾಣ್ಮಾಸಿಕ ಸತ್ರವನ್ನು ರೂಪಿಸಲಾಗಿತ್ತು.

ಪ್ರಥಮ ಪತ್ರಿಕೆಯಲ್ಲಿ ಸಂಶೋಧನೆಯ ಪ್ರಾಥಮಿಕಾಂಶಗಳು - ಸಂಶೋಧನೆಯ ಸ್ವರೂಪ, ಇತಿಹಾಸ, ಸಮಸ್ಯೆಗಳು, ಸಂಶೋಧನಾ ವಿಧಾನ - ವಿಷಯದ ಆಯ್ಕೆ, ಅಧ್ಯಯನ ವಿಧಾನಗಳು, ವಿವಿಧ ಆಕರಗಳ ಜ್ಞಾನ, ಸಂಶೋಧನೆಯಲ್ಲಿ ಗಣಕಯಂತ್ರ ಮತ್ತು ಅಂತರ್ಜಾಲದ ಬಳಕೆ, ಕ್ಷೇತ್ರಕಾರ್ಯ,

ಅಂತರ್ಕ್ಷೇತ್ರೀಯ ಅಧ್ಯಯನ, ವಿಮರ್ಶಾತ್ಮಕ - ವಿಶ್ಲೇಷಣಾತ್ಮಕ - ತುಲನಾತ್ಮಕ - ವಿಶಿಷ್ಟಾಧ್ಯಯನ, ಸರ್ವೇಕ್ಷಣ, ಇತ್ಯಾದಿ ವಿಷಯಗಳ ಜೊತೆಗೆ ಮಹಾಪ್ರಬಂಧದ ಸ್ವರೂಪ ಮತ್ತು ಬರವಣಿಗೆಯ ಶೈಲಿಯ ಬಗೆಗೆ ವಿದ್ಯಾರ್ಥಿಗಳಿಗೆ ಈ ಷಾಣ್ಮಾಸಿಕ ಸತ್ರದಲ್ಲಿ ಬೋಧಿಸಲಾಯಿತು.

ದ್ವಿತೀಯ ಪತ್ರಿಕೆಯಲ್ಲಿ ಲಿಪಿಶಾಸ್ತ್ರ - ಲಿಪಿಗಳ ಇತಿಹಾಸ, ಹಸ್ತಪ್ರತಿಗಳ ಪರಿಚಯ, ಗ್ರಂಥಸಂಪಾದನೆಯ ವಿಧಿವಿಧಾನಗಳು, ಗ್ರಂಥಸಂಪಾದನಾ ಕ್ರಮ, ಮಾತೃಕೆಗಳ ವಂಶನಿರ್ಣಯಕ್ರಮ, ಗ್ರಂಥಸಂಪಾದನಾ ಕ್ಷೇತ್ರದ ಪ್ರಮುಖ ವಿದ್ವಾಂಸರ ಪರಿಚಯ, ಮುಖ್ಯ ಹಸ್ತಪ್ರತಿ ಗ್ರಂಥಾಲಯಗಳ ಪರಿಚಯ ಇತ್ಯಾದಿಗಳ ಜೊತೆಗೆ ಗ್ರಂಥ ಮತ್ತು ನಂದಿನಾಗರಿ ಲಿಪಿಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಲಾಯಿತು.

ತೃತೀಯ ಪತ್ರಿಕೆಯಾದ ಶಾಸ್ತ್ರ ಶಿಕ್ಷಣ ಪದ್ಧತಿಯಲ್ಲಿ ಸಂಶೋಧನಾ ವಿದ್ಯಾರ್ಥಿಗಳ ಸ್ವೀಯ ವಿಶೇಷಾಧ್ಯಯನ ಕ್ಷೇತ್ರಗಳಿಗೆ ಸಂಬಂಧಿಸಿದ ಪಠ್ಯವನ್ನು ಬೋಧಿಸಲಾಯಿತು. ಭಾಷಾವಿಜ್ಞಾನ, ಅಲಂಕಾರಶಾಸ್ತ್ರ, ವೇದ-ವೇದಾಂಗ ಮತ್ತು ವೇದಾಂತಗಳಿಗೆ ಸಂಬಂಧಿಸಿದ ವಿವಿಧ ಪಠ್ಯಗಳನ್ನು ಬೋಧಿಸಲಾಯಿತು.

ಆರು ತಿಂಗಳವರೆಗೆ ಪ್ರತಿದಿನ ಸಂಶೋಧನಾ ವಿದ್ಯಾರ್ಥಿಗಳು ಅತ್ಯುತ್ಸಾಹದಿಂದ ಪಾಲ್ಗೊಂಡ ಈ ಷಾಣ್ಮಾಸಿಕ ಸತ್ರವನ್ನು ಖ್ಯಾತ ವಿದ್ವಾಂಸರಾದ ಪ್ರೊ. ಆರ್. ಮಹದೇವನ್ ಅವರು ಉದ್ಘಾಟಿಸಿದರು. ಮತ್ತು ''ಸಂಸ್ಕೃತ ಸಂಶೋಧನೆ ಮತ್ತು ಆಧುನಿಕ ಜಗತ್ತು'' ಎಂಬ ವಿಷಯದ ಬಗೆಗೆ ವಿಶೇಷೋಪನ್ಯಾಸವನ್ನು ನೀಡಿದರು. ಮತ್ತೋರ್ವ ಶ್ರೇಷ್ಠ ವಿದ್ವಾಂಸರಾದ ಶತಾವಧಾನಿ ಆರ್. ಗಣೇಶ್ ಅವರು ''ಭಾರತೀಯ ಸಂಶೋಧನಾ ಪದ್ಧತಿ'' ಎಂಬ ವಿಷಯದ ಬಗೆಗೆ ಒಂದು ವಾರದವರೆಗೆ ವಿಶೇಷೋಪನ್ಯಾಸಗಳನ್ನು ನಡೆಸಿಕೊಟ್ಟರು. ವಿದ್ವಾಂಸರಾದ ಡಾ|| ಬಿ.ವಿ.ಕೆ. ಶಾಸ್ತ್ರೀಯವರು ''ಜಾಗತಿಕ ಮಟ್ಟದಲ್ಲಿ ಶಾಸ್ತ್ರ ಸಂಶೋಧನೆ'' ಎಂಬ ವಿಷಯವನ್ನು ಕುರಿತು ಮೂರು ದಿನಗಳವರೆಗೆ ವಿದ್ಯಾರ್ಥಿಗಳಿಗೆ ಬೋಧಿಸಿದರು. ಇವರ ಜೊತೆಗೆ ಖ್ಯಾತ ವಿದ್ವಾಂಸರುಗಳಾದ ಹೆಚ್.ವಿ. ನಾಗರಾಜರಾವ್, ಪ್ರೊ. ಹರಿದಾಸ ಭಟ್, ಡಾ|| ಎಂ. ಶಿವಕುಮಾರಸ್ವಾಮಿ, ಡಾ|| ಲಕ್ಷ್ಮೀನಾರಾಯಣ ಭಟ್ಟ, ಡಾ|| ಸತ್ಯನಾರಾಯಣಾಚಾರ್ಯ, ಡಾ|| ಸಂಪತ್ಕುಮಾರಾಚಾರ್ಯ, ಡಾ|| ಟಿ.ವಿ. ಸತ್ಯನಾರಾಯಣ, ಡಾ|| ಮಹಾಬಲೇಶ್ವರ ಭಟ್, ಇತ್ಯಾದಿ ವಿದ್ವಾಂಸರು ವಿಶೇಷೋಪನ್ಯಾಸಗಳನ್ನು ನಡೆಸಿಕೊಟ್ಟರು.

ಇದಲ್ಲದೇ ದೈನಂದಿನ ವಿವಿಧ ವಿಷಯಗಳ ಬಗೆಗಿನ ತರಗತಿಗಳನ್ನು ವಿಶ್ವವಿದ್ಯಾಲಯದ ಶಾಸ್ತ್ರನಿಕಾಯಾಧ್ಯಕ್ಷರಾದ ಪ್ರೊ. ಶ್ರೀನಿವಾಸ ವರಖೇಡಿ, ಸಂಧ್ಯಾ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪ್ರೊ. ಕೆ.ಎಸ್. ಕಣ್ಣನ್, ಸಹಾಯಕ ಪ್ರಾಧ್ಯಾಪಕರುಗಳಾದ ಡಾ|| ಶರತ್ ಚಂದ್ರ ಸ್ವಾಮಿ, ಡಾ|| ವಿನಯ್, ಡಾ|| ಕೃಷ್ಣ ಜೋಶಿ, ಡಾ|| ವಿನಾಯಕ ನಾಮಣ್ಣನವರ, ಡಾ|| ಮಂಜುನಾಥ ಭಟ್ಟ, ಭಾಸ್ಕರ ಭಟ್ಟ ಜೋಶಿ ಮುಂತಾದವರು ನಡೆಸಿಕೊಟ್ಟರು.

ಈ ತರಗತಿಗಳ ಜೊತೆಗೆ ವಿದ್ಯಾರ್ಥಿಗಳಿಗಾಗಿ ನವೆಂಬರ್ ಮಾಸದಲ್ಲಿ ಬೆಂಗಳೂರಿನ ಸಂಸ್ಕೃತ ಭಾರತಿಯ ಅಕ್ಷರಮ್ ಕೇಂದ್ರದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದೊಡನೆ ಒಂದು ವಾರದವರೆಗೆ ವಿಶೇಷ ವ್ಯಾಕರಣಶಾಸ್ತ್ರ ಕಾರ್ಯಾಗಾರವೊಂದನ್ನು ಏರ್ಪಡಿಸಲಾಗಿತ್ತು. ಅದೇ ತಿಂಗಳಿನಲ್ಲಿ ಕೇರಳದ ಎರ್ನಾಕುಲಂನ ಚಿನ್ಮಯ ಇಂಟರ್‌ನ್ಯಾಷನಲ್ ಫೌಂಡೇಶನ್ ವತಿಯಿಂದ ಏರ್ಪಡಿಸಲಾಗಿದ್ದ ಕಾರ್ಯಾಗಾರದಲ್ಲಿ ಕೋರ್ಸ್‌ವರ್ಕ್‌ನ ಸಂಶೋಧನಾ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಿಸೆಂಬರ್ ತಿಂಗಳಿನಲ್ಲಿ ಸುಪ್ರಸಿದ್ಧ ಸಂಸ್ಕೃತ ವಿಕಿಪೀಡಿಯಾದ ದಶಮಾನೋತ್ಸವ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮತ್ತು ಈ ಸಂದರ್ಭಧಲ್ಲಿ ವಿಕಿಪೀಡಿಯಾದ ಬಗೆಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು. ಜನವರಿ ತಿಂಗಳಿನಲ್ಲಿ ಅಕ್ಷರಮ್‌ನಲ್ಲಿ ನಡೆದ ಸಂಸ್ಕೃತ ವಚೋವಿಚ್ಛಿತ್ತಿಯ ಬಗೆಗಿನ ಕಾರ್ಯಾಗಾರದಲ್ಲೂ ಸಂಶೋಧನಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೋರ್ಸ್‌ವರ್ಕ್ ತರಗತಿಗಳ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ತಮ್ಮ ವಿಶೇಷಾಧ್ಯಯನ ಕ್ಷೇತ್ರಗಳ ಬಗೆಗೆ ವಿವಿಧ ವಿಷಯಗಳನ್ನೊಳಗೊಂಡ ಸೆಮಿನಾರ್‌ಗಳನ್ನು ನಡೆಸಿಕೊಟ್ಟರು. ಜೊತೆಗೆ ಚರ್ಚಾಗೋಷ್ಠಿಗಳು, ಸಂಶೋಧನಾನುಭವಗಳು ಹಾಗೂ ವಿಚಾರ ವಿನಿಮಯಗಳು ನಿರಂತರವಾಗಿ ಪ್ರತಿದಿನ ನಡೆಯುತ್ತಿದ್ದವು. ಕೋರ್ಸ್‌ವರ್ಕ್ ಅಂತ್ಯದಲ್ಲಿ ಸಂಶೋಧನ ವಿದ್ಯಾರ್ಥಿಗಳಿಂದ ಅಭಿಪ್ರಾಯ (Feedback) ಗಳನ್ನು ಸಂಗ್ರಹಿಸಲಾಯಿತು. ಬಹುತೇಕ ವಿದ್ಯಾರ್ಥಿಗಳು ಈ ಷಾಣ್ಮಾಸಿಕ ಸತ್ರದ ಬಗೆಗೆ ಅತ್ಯಂತ ಸಂತೃಪ್ತಿಯನ್ನು ವ್ಯಕ್ತಪಡಿಸಿ, ಇದರಿಂದ ಅವರಿಗೆ ದೊರಕಿದ ಸಂಶೋಧನೆಯ ಬಗೆಗಿನ ಹೊಸ ದೃಷ್ಟಿ ಮತ್ತು ವಿವಿಧ ವಿದ್ವಾಂಸರ ಉಪನ್ಯಾಸಗಳಿಂದುಂಟಾದ ಜ್ಞಾನಲಾಭವನ್ನು ವ್ಯಕ್ತಪಡಿಸಿದ್ದಾರೆ. ಈ ಕೋರ್ಸ್‌ವರ್ಕ್‌ನಿಂದ ಸಂಶೋಧನೆಗೆ ಅಗತ್ಯವಾದ

ಮಾರ್ಗದರ್ಶನದ ಜೊತೆಗೆ ವಿವಿಧ ಶಾಸ್ತ್ರಗಳ, ವೇದಾಂತಗಳ, ಭಾಷಾವಿಜ್ಞಾನದ, ಆಧುನಿಕ ಸಂಶೋಧನಾ ಪದ್ಧತಿಗಳ, ಗಣಕವಿಜ್ಞಾನ ಇತ್ಯಾದಿಗಳ ಅಮಿತ ಜ್ಞಾನ ಲಭ್ಯವಾಯಿತೆಂಬುದು ವಿದ್ಯಾರ್ಥಿಗಳ ಅಭಿಪ್ರಾಯ.

ಈ ಷಾಣ್ಮಾಸಿಕ ಸತ್ರದ ಮುಕ್ತಾಯದ ನಂತರ ದಿನಾಂಕ 19ರಿಂದ 21 ಫೆಬ್ರವರಿ 2014 ರವರೆಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ಲಿಖಿತ ಮತ್ತು ವಕ್ತ್ರರೀಕ್ಷೆಗಳನ್ನು ನಡೆಯಲಿವೆ. ಏಪ್ರಿಲ್ ಮಾಸದಲ್ಲಿ ಈ ಪರೀಕ್ಷೆಗಳ ಫಲಿತಾಂಶವು ಬಂದ ನಂತರ ಯಶಸ್ವೀ ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಕಾರ್ಯಗಳನ್ನು ಆರಂಭಿಸಲಿದ್ದಾರೆ.

ಈ ಕೋರ್ಸ್‌ವರ್ಕ್‌ಗೆ ಸಂಬಂಧಿಸಿದ ಪಠ್ಯಕ್ರಮ, ತರಗತಿ, ಪರೀಕ್ಷೆ ಇತ್ಯಾದಿಗಳು ವಿಶ್ವವಿದ್ಯಾಲಯದ ಶಾಸ್ತ್ರನಿಕಾಯದ ಮತ್ತು ಅಧ್ಯಯನಾಂಗದ ನಿರ್ದೇಶಕರಾದ ಪ್ರೊ. ಶ್ರೀನಿವಾಸ ವರಖೇಡಿಯವರ ಮಾರ್ಗದರ್ಶಕತ್ವದಲ್ಲಿ ಜರುಗಿದವು. ವೇದಾಂತ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ॥ ಶರತ್ ಚಂದ್ರ ಸ್ವಾಮಿಯವರು ಸಂಯೋಜಕರಾಗಿ ಕಾರ್ಯನಿರ್ವಹಿಸಿದರು. ಯೋಜನಾ ಸಹಾಯಕರಾದ ಶ್ರೀಮತಿ ಹೆಚ್.ಕೆ. ಶ್ರುತಿಯವರು ಕೋರ್ಸ್‌ವರ್ಕ್‌ಗೆ ಸಂಬಂಧಿಸಿದಂತೆ ಸಹಾಯಕರಾಗಿ ಕಾರ್ಯನಿರ್ವಹಿಸಿದರು.

## ವಿಶೇಷ ಉಪನ್ಯಾಸಗಳು

| ಕ್ರ.ಸಂ. | ದಿನಾಂಕ | ಉಪನ್ಯಾಸಕರ ಹೆಸರು | ವಿಷಯ |
|---|---|---|---|
| 1. | 30.12.2013 | ಡಾ॥ ಟಿ.ವಿ. ಸತ್ಯನಾರಾಯಣ<br>ನಿವೃತ್ತ ಸಂಶೋಧನ ಸಹಾಯಕರು, O.R.I. University of Mysore | ನಂದಿನಾಗರೀ ಲಿಪಿ |
| 2. | 01.01.2014 | ಡಾ॥ ಸತ್ಯನಾರಾಯಣಾಚಾರ್ಯ<br>ಪ್ರಾಂಶುಪಾಲರು, ಪೂರ್ಣಪ್ರಜ್ಞ ವಿದ್ಯಾಪೀಠ | ಯಾಜ್ಞವಲ್ಕ್ಯಸ್ಮೃತಿ,<br>ಶಾಬ್ದ ತರಂಗಿಣೀ |
| 3. | 04.01.2014 | ಪ್ರೊ. ಲಕ್ಷ್ಮೀನಾರಾಯಣ ಭಟ್ಟ<br>ಪ್ರಾಧ್ಯಾಪಕರು, ಉಡುಪಿ | ಭರತನ ನಾಟ್ಯಶಾಸ್ತ್ರ<br>ರಸಾಧ್ಯಾಯ |
| 4. | 04.01.2014 | ಡಾ. ಹೆಚ್.ವಿ. ನಾಗರಾಜರಾವ್<br>O.R.I. University of Mysore | ಕಾವ್ಯಾಲಂಕಾರ<br>ಸೂತ್ರವೃತ್ತಿ |
| 5. | 07.01.2014 | ಡಾ॥ ಮಹಾಬಲೇಶ್ವರ ಭಟ್<br>ವೇದವಿಜ್ಞಾನ ಗುರುಕುಲ | ಜನ್ಮಾಧಿಕರಣ (ಅದ್ವೈತ) |
| 6. | 08.01.2014 | ಡಾ॥ ಸಂಪತ್ಕುಮಾರಾಚಾರ್ಯ<br>ಪ್ರಾಂಶುಪಾಲರು, ಬೆಂಗಳೂರು | ಜನ್ಮಾಧಿಕರಣ<br>(ವಿಶಿಷ್ಟಾದ್ವೈತ) |
| 7. | 09.01.2014 | ಡಾ॥ ಹರಿದಾಸ ಭಟ್ | ಜನ್ಮಾಧಿಕರಣ (ದ್ವೈತ) |
| 8. | 09.01.2014 | ಡಾ॥ ಸತ್ಯನಾರಾಯಣಾಚಾರ್ಯ<br>ಪ್ರಾಂಶುಪಾಲರು, ಪೂರ್ಣಪ್ರಜ್ಞ ವಿದ್ಯಾಪೀಠ | ಪಾಣಿನೀಯ ಶಿಕ್ಷಾ |
| 9. | 07.01.2014 | ಡಾ॥ ಎಂ. ಶಿವಕುಮಾರ ಸ್ವಾಮಿ | ಋಗ್ಭಾಷ್ಯ ಭೂಮಿಕಾ |
| 10. | 10.01.2014 | ಪ್ರೊ. ಕೆ.ಪಿ. ರಾವ್ | ಸಂಗಣಕ ಯಂತ್ರದಲ್ಲಿ-<br>ಸಂಸ್ಕೃತ ಕೀಲಿಮಣೆ |
| 11. | 15.01.2014 | ಪ್ರೊ. ಚಾಂದಕಿರಣ ಸಲೂಜಾ, ದೆಹಲಿ | ಸಂಸ್ಕೃತ ಶಿಕ್ಷಣ |

# ಗ್ರಂಥ ಲೋಕಾರ್ಪಣೆ

ದಿನಾಂಕ 24-12-2013 ರಂದು ಮಂಗಳವಾರ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆ ಆವರಣದ ಡಾ|| ಶಿವರಾತ್ರಿ ರಾಜೇಂದ್ರ ಭವನದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗ ಹಾಗೂ ಮೈಸೂರಿನ ಸಂವಹನ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ವಿದ್ವಾನ್ ಎಚ್.ವಿ. ನಾಗರಾಜರಾವ್‌ರವರು ಅನುವಾದಿಸಿದ ವ್ಯಕ್ತಿವಿವೇಕ ಗ್ರಂಥವು ಲೋಕಾರ್ಪಣೆಗೊಂಡಿತು.

ಸುತ್ತೂರು ಕ್ಷೇತ್ರದ ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿ ಗ್ರಂಥದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮೈಸೂರಿನ ಪ್ರಸಿದ್ಧ ಸಾಹಿತಿಗಳಾದ ಡಾ|| ಸಿ.ಪಿ. ಕೃಷ್ಣಕುಮಾರ್‌ರವರು ಗ್ರಂಥ ಕುರಿತು ಸಮಗ್ರವಾದ ಚಿತ್ರಣವನ್ನು ಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷರಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು ಮಾತನಾಡಿ 'ವಿಶ್ವವಿದ್ಯಾಲಯವು ಈಗ ಪ್ರಕಟಿಸುತ್ತಿರುವ ಅಲಂಕಾರ ಶಾಸ್ತ್ರ ತತ್ವಜ್ಞನಾದ ಮಹಿಮಭಟ್ಟನ ವ್ಯಕ್ತಿವಿವೇಕವು ಒಂದು ವಿಲಕ್ಷಣ ಗಣ್ಯಕೃತಿ ಎನಿಸಿದೆ. ಇಂತಹ ಶಾಸ್ತ್ರ ಕೃತಿಯ ಕನ್ನಡಾನುವಾದವನ್ನು ನಮ್ಮ ನಡುವಿನ ಗಣ್ಯವಿದ್ವಾಂಸರಾದ ರಾಷ್ಟ್ರಪ್ರಶಸ್ತಿ ಪುರಸ್ಕೃತರೂ, ಆದ ವಿದ್ವಾನ್ ಎಚ್.ವಿ. ನಾಗರಾಜರಾವ್ ಮಾಡಿಕೊಟ್ಟಿದ್ದಾರೆ. ಈ ಗ್ರಂಥವು ಕನ್ನಡ-ಸಂಸ್ಕೃತ ಅಲಂಕಾರ ಶಾಸ್ತ್ರದ ಬೆಳವಣಿಗೆಯಲ್ಲಿ ತನ್ನದೇ ಆದ ನೆಲೆಯನ್ನು ಪಡೆದಿದೆ. ಇದು ಕನ್ನಡಕ್ಕೆ ಉತ್ತಮ ಶಾಸ್ತ್ರಮರ್ಯಾದೆಯನ್ನು ತಂದುಕೊಡುತ್ತದೆಂಬ ನಂಬುಗೆ ನನಗಿದೆ.'' ಎಂದು ತಿಳಿಸಿದರು.

ಈ ಸಭೆಯಲ್ಲಿ ವಿದ್ವಾನ್ ಎಚ್.ವಿ. ನಾಗರಾಜರವರು ಹಾಗೂ ಇತರ ಗಣ್ಯವ್ಯಕ್ತಿಗಳು ವಿದ್ವಾಂಸರು ಉಪಸ್ಥಿತರಿದ್ದರು.

## Release of Book:

"Knowledge Representation: Navya Nyaya and Conceptual Graphs," Author: Prof. Shrinivasa Varakhedi

Publishers: Chinmaya International Foundation Shodha Sanshan, Ernakulam, Kerala

The book "Knowledge Representation: Navya Nyaya and Conceptual Graphs' authored by Prof. Shrinivasa Varakhedi was released here today on 30th of December, 2013, in the Seminar Hall of Karnataka Samskrit University, Chamarajpet, Bangalore, at 3:30 P.M. It was a gathering of intellectuals and dignitaries across disciplines. The function was presided over by Prof. Mallepuram G Venkatesh, Vice-chancellor, Karnataka Samskrit University, Chamarajpet, Bangalore and the book was formally released by the learned professor. Prof Mallepuram G Venkatesh spoke on the need to present the ancient Shastras with modern methods of learning like symbolic and diagrammatical representations. Prof. D Prahladachar, Former Vice-Chancellor, Rashtriya Samskrita Vidyapeetha, Tirupathi, was the guest of honour. The renowned professor enlightened the audience on the important place logic occupies in Indian philosophy. Pro. K.S. Kannan, Principal, Sanskrit Evening College, spoke about the book. He spoke on the important inter-disciplinary links between modern and classical logic. The Author, Prof. Shrinivasa Varakhedi, Dean of Shastras, Karnataka Samskrit University, Chamarajpet, Bangalore spoke on the insights and critical thinking involved in the writing of the book. Intellectuals and students shared their opinion and the book was well-received by the public.

# ಸಂಪನ್ನಗೊಂಡ ರಾಜ್ಯಸ್ತರದ ಶಾಸ್ತ್ರೀಯ ಸ್ಪರ್ಧೆಗಳು

ವರದಿ : ಡಾ. ಮಂಜುನಾಥ ಭಟ್

**'ಶಾಸ್ತ್ರಂ ಸುಚಿಂತಿತಮಥೋ ಪರಿಚಿಂತನೀಯಂ'** ಎಂಬ ಉಕ್ತಿಗನುಗುಣವಾಗಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನವು ನಡೆಸುವ ರಾಷ್ಟ್ರಸ್ತರೀಯ ಶಾಸ್ತ್ರೀಯ ಸ್ಪರ್ಧೆಗಳಿಗೆ ಪೂರ್ವಭಾವಿಯಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರತಿ ವರ್ಷವೂ ರಾಜ್ಯಸ್ತರೀಯ ಶಾಸ್ತ್ರೀಯ ಸ್ಪರ್ಧೆಗಳನ್ನು ಆಯೋಜಿಸುತ್ತಾ ಬಂದಿರುವುದು ವಿದಿತವಾಗಿರುವ ಅಂಶ. ಆಯಾ ರಾಜ್ಯದ ವಿವಿಧ ಸಂಸ್ಕೃತ ಪಾಠಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರೋತ್ಸಾಹಿಸುವುದು ಮತ್ತು ಶಾಸ್ತ್ರಾಧ್ಯಯನ ಪರಂಪರೆಯನ್ನು ಪ್ರಚೋದಿಸುವುದೇ ಸ್ಪರ್ಧೆಗಳ ಪ್ರಧಾನ ಧ್ಯೇಯ. ಅದರಂತೆ 2013-14ನೇ ಸಾಲಿನ ರಾಜ್ಯಸ್ತರೀಯ ಶಾಸ್ತ್ರೀಯ ಸ್ಪರ್ಧೆಗಳು 2014ರ ಜನವರಿ ತಿಂಗಳ ದಿನಾಂಕ 8 ಹಾಗೂ 9 ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ತುಮಕೂರಿನ ಶ್ರೀ ಸಿದ್ಧಗಂಗಾ ಕ್ಷೇತ್ರದ ಶ್ರೀ ಸಿದ್ಧಗಂಗೇಶ್ವರ ವೇದ ಸಂಸ್ಕೃತ ಸ್ನಾತಕ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ನಡೆಯಿತು.

ರಾಜ್ಯದ ಸುಮಾರು 18 ಸಂಸ್ಕೃತ ಕಾಲೇಜುಗಳಲ್ಲಿನ 145 ವಿದ್ಯಾರ್ಥಿಗಳು ತಮ್ಮ ಮಾರ್ಗದರ್ಶಕರ ಜೊತೆಗೆ ಸ್ಪರ್ಧಾಳುಗಳಾಗಿ ಪಾಲ್ಗೊಂಡಿದ್ದರು. ಸ್ಪರ್ಧೆಯ ಅಂಗವಾಗಿ ದಿನಾಂಕ 8.1.2014 ಬುಧವಾರ ಬೆಳಿಗ್ಗೆ 10.30ಕ್ಕೆ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಶ್ರೀ ಸಿದ್ಧಗಂಗಾ ಕ್ಷೇತ್ರದ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ವಹಿಸಿದ್ದರು. ಸಾರಸ್ವತಾತಿಥಿಗಳಾಗಿ ಆಗಮಿಸಿದ ಬೆಂಗಳೂರು ವಿಶ್ವ ವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎಂ. ಶಿವ ಕುಮಾರಸ್ವಾಮಿಗಳು ಸಮಾರಂಭವನ್ನು ಉದ್ಘಾಟಿಸಿ ಸ್ಪರ್ಧೆಗೆ ಆಗಮಿಸಿದ ವಿದ್ಯಾರ್ಥಿಗಳಿಗೆ ತಮ್ಮ ಪ್ರೋತ್ಸಾಹಪೂರ್ಣ ಮಾತುಗಳಿಂದ ಉತ್ತೇಜನ ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕ.ಸಂ.ವಿ.ಯ ಅಧ್ಯಯನಾಂಗದ ನಿರ್ದೇಶಕರಾದ ಪ್ರೊ. ಶ್ರೀನಿವಾಸ ವರಖೇಡಿಯವರು ಮಾತನಾಡಿ ಸ್ಪರ್ಧೆಗೆ ಆಗಮಿಸಿದ ವಿದ್ಯಾರ್ಥಿಗಳು 'ತಾವು ಸ್ಪರ್ಧಾ ಕಂಪವನ್ನು ಅನುಭವಿಸದೇ ಸ್ಪರ್ಧೆಯ ನಿರ್ಣಾಯಕರಿಗೆ ಕಂಪನ ಉಂಟಾಗುವ ರೀತಿಯಲ್ಲಿ ವಿಷಯವನ್ನು ಪ್ರತಿಪಾದಿಸಿ ಉತ್ಸಾಹಭರಿತರಾಗಿರಬೇಕೆಂದು' ಹುರಿದುಂಬಿಸಿದರು. ಹಾಗೂ ಶ್ರೀ ಸಿದ್ಧಗಂಗೇಶ್ವರ ಕಾಲೇಜಿನ ಪ್ರಾಂಶುಪಾಲರಾದ ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ ಅವರು ಸಮರ್ಪಕವಾಗಿ ಕಾರ್ಯಕ್ರಮದ ನಿರ್ವಹಣೆಯನ್ನು ಮಾಡಿದರು. ಕಾರ್ಯಕ್ರಮದ ಸ್ವಾಗತವನ್ನು ಕ.ಸಂ.ವಿ.ಯ ಸಹಾಯಕ ಪ್ರಾಧ್ಯಾಪಕರಾದ ಡಾ|| ಮಂಜುನಾಥ ಭಟ್‌ರವರು ಮಾಡಿ, ವಂದನಾರ್ಪಣೆಯನ್ನು ವಿದ್ವಾನ್ ಜಿ.ಸಿ. ರಾಜಶೇಖರಯ್ಯರವರು ಮಾಡಿದರು.

ಉದ್ಘಾಟನಾ ಸಮಾರಂಭದ ನಂತರ 12 ಗಂಟೆಗೆ ಸರಿಯಾಗಿ ಶಾಸ್ತ್ರೀಯ ಸ್ಪರ್ಧೆಗಳು ಪ್ರಾರಂಭವಾದವು. ಭಾಷಣ ಸ್ಪರ್ಧೆ, ಶಲಾಕಾ ಸ್ಪರ್ಧೆ, ಕಂಠಪಾಠ ಸ್ಪರ್ಧೆ - ಹೀಗೆ ಒಟ್ಟು 22 ಬಗೆಯ ಸ್ಪರ್ಧೆಗಳು ಎರಡು ದಿನಗಳಲ್ಲಿ ಯಶಸ್ವಿಯಾಗಿ ನಡೆದವು.

ದಿನಾಂಕ 9.1.2014 ಗುರುವಾರದಂದು ಶಾಸ್ತ್ರೀಯ ಸ್ಪರ್ಧೆಗಳ ಸಮಾರೋಪ ಸಮಾರಂಭವು ಮಧ್ಯಾಹ್ನ 3.30ಕ್ಕೆ ನಡೆಯಿತು. ಶ್ರೀ ಸಿದ್ಧಗಂಗಾ ಮಠದ ಪರಮ ಪೂಜ್ಯ ಸ್ವಾಮೀಜಿಗಳೀರ್ವರ ಕೃಪಶೀರ್ವಾದದಿಂದ ನಡೆದ ಸಮಾರಂಭಕ್ಕೆ ಅತಿಥಿಗಳಾಗಿ ಆಗಮಿಸಿದ ಶ್ರೀ ಸಿದ್ಧಗಂಗೇಶ್ವರ ವೇದ ಸಂಸ್ಕೃತ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ವಿದ್ವಾನ್ ಪಿ.ಎನ್. ಚಂದ್ರಶೇಖರರವರು ವಿದ್ಯಾರ್ಥಿಗಳನ್ನು ಕುರಿತು ಹಿತವಚನ ನುಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ. ಜಿ. ವೆಂಕಟೇಶರವರು ಮಾತನಾಡುತ್ತಾ ವಿದ್ಯಾರ್ಥಿಗಳಲ್ಲಿ ಸ್ಪರ್ಧಾಮನೋಭಾವ ಹೆಚ್ಚುವಂತೆಯೂ ಹಾಗೂ ಶಾಸ್ತ್ರಾಧ್ಯಯನ ಪ್ರವೃತ್ತಿ ಹೆಚ್ಚಾಗುವಂತೆಯೂ ವಿವಿಧ ಉದಾಹರಣೆಗಳ ಮೂಲಕ ಪ್ರೋತ್ಸಾಹಿಸಿದರಲ್ಲದೇ, ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪುರಸ್ಕಾರ ಪ್ರದಾನ ಮಾಡಿದರು. ಸ್ಪರ್ಧೆಗಳ ಸ್ಥಾನಿಕ ಸಂಯೋಜಕತ್ವವನ್ನು ವಹಿಸಿದ್ದ ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯರವರೂ, ಕ.ಸಂ.ವಿ.ಯ ಸಂಯೋಜಕರಾದ

ವಿದ್ವಾನ್ ಬಿ. ಗೋವಿಂದ ಹಾಗೂ ಡಾ|| ಮಂಜುನಾಥ ಭಟ್‌ರವರು ಕಾರ್ಯಕ್ರಮದ ಸಾಫಲ್ಯಕ್ಕೆ ಕಾರಣರಾದರು.

ಕಾರ್ಯಕ್ರಮದಲ್ಲಿ ಸ್ಪರ್ಧೆಗೆ ನಿರ್ಣಾಯಕರಾಗಿ ಆಗಮಿಸಿದ್ದ ವಿದ್ವಾಂಸರಾದ ಪಾಂಡಿಚೇರಿಯ EFEO ದ ಸಂಶೋಧಕರಾದ ಡಾ|| ಎಸ್.ಎಲ್.ಪಿ.ಆಂಜನೇಯ ಶರ್ಮಾ ಮತ್ತು ಬೆಂಗಳೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಡಾ|| ರಾಘವೇಂದ್ರ ಭಟ್‌ರವರು ಆಗಮಿಸಿದ ವಿದ್ಯಾರ್ಥಿಗಳ ಸಾಧನೆಯನ್ನು ಪ್ರಶಂಸಿಸಿದರು. ಮಾರ್ಗದರ್ಶಕರ ಪರವಾಗಿ ಮಾತನಾಡಿದ ಸ್ವರ್ಣವಲ್ಲಿಯ ಶ್ರೀರಾಜರಾಜೇಶ್ವರಿ ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾದ ವಿದ್ವಾನ್ ಶಂಕರ ಭಟ್ಟ ಬಾಲಿಗದ್ದೆ - ಇವರು ಸ್ಪರ್ಧೆಯನ್ನು ಹಾಗೂ ಇದರ ವ್ಯವಸ್ಥೆಯನ್ನು ತಮ್ಮ ಭಾಷಣದಲ್ಲಿ ಪ್ರಶಂಸಿದರು. ಜೊತೆಗೆ ವಿದ್ಯಾರ್ಥಿಗಳೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಶ್ರೀ ಸಿದ್ಧಗಂಗಾ ಕಾಲೇಜಿನ ವೇದ ವಿಭಾಗದ ಅಧ್ಯಾಪಕರಾದ ವಿದ್ವಾನ್ ಪ್ರಶಾಂತ ಭಟ್‌ರವರು ನಿರೂಪಣೆಯನ್ನು ಮಾಡಿದರು.

ರಾಜ್ಯಸ್ತರೀಯ ಸ್ಪರ್ಧೆಯಲ್ಲಿ ಶೃಂಗೇರಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ರಾಜೀವ ಗಾಂಧಿಪರಿಸರವು ಪ್ರಥಮ-8, ದ್ವಿತೀಯ-5, ತೃತೀಯ-5 ಸ್ಥಾನಗಳೊಂದಿಗೆ ಮೊದಲ ಸ್ಥಾನವನ್ನು ಪಡೆಯಿತು. ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು ಪ್ರಥಮ-5, ದ್ವಿತೀಯ-2, ತೃತೀಯ-4 ಸ್ಥಾನಗಳೊಂದಿಗೆ ಎರಡನೆಯ ಸ್ಥಾನವನ್ನು ಹಾಗೂ ಉಡುಪಿಯ ಎಸ್.ಎಂ.ಎಸ್.ಪಿ. ಕಾಲೇಜು ಪ್ರಥಮ-5, ದ್ವಿತೀಯ-2, ತೃತೀಯ-2 ಸ್ಥಾನಗಳೊಂದಿಗೆ ಮೂರನೆಯ ಸ್ಥಾನವನ್ನು ಪಡೆಯಿತು. ಉಳಿದ ಕಾಲೇಜುಗಳೂ ಕೂಡ ಸ್ಪರ್ಧೆಗಳಲ್ಲಿ ಉತ್ತಮವಾಗಿ ಪಾಲ್ಗೊಂಡಿದ್ದವು.

ಹೀಗೆ ಶ್ರೀ ಸಿದ್ಧಗಂಗಾ ಮಠದ ಪೂಜ್ಯ ಸ್ವಾಮಿಗಳೀರ್ವರ ದಿವ್ಯಸಾನ್ನಿಧ್ಯದಲ್ಲಿ ಹಾಗೂ ಅವರ ಕೃಪಾಶೀರ್ವಾದದಿಂದ ಮತ್ತು ಶ್ರೀ ಸಿದ್ಧಗಂಗೇಶ್ವರ ವೇದ ಸಂಸ್ಕೃತ ಕಾಲೇಜಿನ ಪ್ರಾಚಾರ್ಯ ಮತ್ತು ಅಧ್ಯಾಪಕರ ಸಹಕಾರದಿಂದ ಸ್ಪರ್ಧೆಗಳು ಯಶಸ್ವಿಯಾಗಿ ನಡೆದವು.

**ಸ್ಪರ್ಧೆಗೆ ಸಂಬಂಧಿಸಿದ ಕೆಲವು ನಿರ್ಣಯಗಳು**

ರಾಜ್ಯಸ್ತರೀಯ ಸ್ಪರ್ಧೆಯಲ್ಲಿ ಕೆಲವು ಮುಖ್ಯ ನಿರ್ಣಯಗಳನ್ನು ಸ್ವೀಕರಿಸಲಾಯಿತು.

- ★ ಭಾಷಣ ಸ್ಪರ್ಧೆಗೆ ಸಹಾಯಕ ಗ್ರಂಥಗಳಿಗನುಗುಣವಾಗಿ ಮೂರು ವಿಷಯಗಳನ್ನು ವಿಶ್ವವಿದ್ಯಾಲಯದಲ್ಲಿಯೇ ತೀರ್ಮಾನಿಸುವುದು.
- ★ ತೀರ್ಮಾನಿಸಿದ ಈ ಮೂರು ವಿಷಯಗಳಲ್ಲಿ ಒಂದು ವಿಷಯವನ್ನು ವಿದ್ಯಾರ್ಥಿಗಳಿಂದಲೇ ಚೀಟಿ ಎತ್ತುವ ಮೂಲಕ ಘೋಷಿಸುವುದು.
- ★ ವಿದ್ಯಾರ್ಥಿಗಳ ಅನುಕೂಲಕ್ಕೆ ಒಂದೂವರೆ ತಾಸಿನ ಕಾಲಾವಧಿಯನ್ನು ಭಾಷಣದ ಸಿದ್ಧತೆಗೆ ನೀಡುವುದು.
- ★ ಸ್ಪರ್ಧೆಯು ನಡೆಯುವ ಸ್ಥಳದಲ್ಲೇ ಚೀಟಿ ಎತ್ತುವುದರ ಮೂಲಕ ಸ್ಪರ್ಧಿಗಳ ಕ್ರಮಸಂಖ್ಯೆಯನ್ನು ನಿರ್ಧರಿಸುವುದು.
- ★ ಸ್ಪರ್ಧೆಯ ಫಲಿತಾಂಶವನ್ನು ಸ್ಪರ್ಧೆಯು ಮುಗಿದ ನಂತರ ಸ್ಪರ್ಧೆ ನಡೆದ ಸ್ಥಳದಲ್ಲಿಯೇ ಪ್ರಕಟಿಸುವುದು.



## Seminar on water :

The institute for Socio Economic Change ISEC, Bangalore and Karnataka Samskrit University, Bangalore, had a joint review session on (30-11-2013) the theme 'water' with the help of domain experts in Ecology and Culture.

Prof. K.V. Raju and his colleagues had a dialogue with a group of Sanskrit scholars in the Karnataka Samskrit University where Shri. Sudhakara Sharma's working paper on 'water' was presented and reviewed with special reference to Samskrit scriptures. Prof. Mallepuram G. Venkatesh, VC, Prof. Srinivas Varkhedi, Dean, Dr. Ramachandra Bhat, Dr. Jayanthi, Dr. B.V.K. Shastry, Dr. A.V. Nagasampige and other learned scholars were present on the occasion. It was a mutually enlightening session.

# ಶ್ರೀ ಉಜ್ಜಯಿನಿ ಜಗದ್ಗುರು ಸಿದ್ಧೇಶ್ವರ ಸಂಸ್ಕೃತ ಮಹಾವಿದ್ಯಾಲಯದ ಪ್ರಾರಂಭ ಹಾಗೂ ಗುಲ್ಬರ್ಗ ವಲಯ ಸಂಸ್ಕೃತೋತ್ಸವ



ದಿನಾಂಕ 31-08-2013ನೇ ಶನಿವಾರದಂದು ಬಳ್ಳಾರಿಯ ಗುಗ್ಗರಹಟ್ಟಿಯಲ್ಲಿ ಬೆಳಿಗ್ಗೆ 10.30ಕ್ಕೆ ಸಂಸ್ಕೃತ ಮಹಾವಿದ್ಯಾಲಯದ ಉದ್ಘಾಟನೆಯನ್ನು ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ 1008 ಶ್ರೀ ಜಗದ್ಗುರು ತ್ರಿಲೋಚನ ಶಿವಾಚಾರ್ಯ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಮಾನ್ಯಶ್ರೀ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ಉದ್ಘಾಟನೆ ಮಾಡಿ 11.00 ಘಂಟೆಗೆ ಶ್ರೀ ಶರಭೇಶ್ವರ ಸಭಾಭವನದಲ್ಲಿ ಸಂಸ್ಕೃತಭಾರತೀಯ ಸಂಘಟನ ಮಂತ್ರಿಯಾದ ವಿದ್ವಾನ್ ಶ್ರೀ ರಾಮಕೃಷ್ಣ ಭಟ್ಟ ಧಾರವಾಡ ಇವರೊಂದಿಗೆ ದೀಪಜ್ವಾಲನದೊಂದಿಗೆ ''ಗುಲ್ಬರ್ಗ ವಲಯ ಸಂಸ್ಕೃತೋತ್ಸವ''ವನ್ನು ಉದ್ಘಾಟಿಸಿದರು. ಕುಲಪತಿಗಳು ತಮ್ಮ ಭಾಷಣದಲ್ಲಿ, ಸಂಸ್ಕೃತಕ್ಕೆ ಎರಡು ಮುಖಗಳು ಒಂದು ಸ್ಥಾವರ ಮತ್ತು ಜಂಗಮ. ಶಾಲಾ ಕಾಲೇಜುಗಳು ಹಾಗೂ ಉತ್ಸವ, ವಿದ್ವಾಂಸರ ಇತರೆ ಚಟುವಟಿಕೆಗಳು. ಸಂಸ್ಕೃತ ಭಾಷೆ ವರ್ಧಮಾನ ಎಂದರೆ ಹರಿಯುವ ನೀರು. ಸಂಸ್ಕೃತಕ್ಕೆ ಬೇರೆ ಭಾಷೆಗಳಿಗೆ ಜೀವ ಕೊಡೋ ಶಕ್ತಿ ಇದೆ. ತಾನೂ ಬೆಳೆಯುತ್ತಾ ಇತರೆ ಭಾಷೆಗಳನ್ನು ಬೆಳೆಸುತ್ತದೆ. ಸಂಸ್ಕೃತವು ಜ್ಞಾನೋಪಯೋಗಿ, ಮನಸ್ಸಿಗೆ ಪರಿಣಾಮಕಾರಿಯಾಗುವ ಮಂತ್ರ ಭಾಷೆ, ಓಂಕಾರ ಜಗದ್ವ್ಯಾಪಿ ಸಂಸ್ಕಾರ ರೂಪಿಸುವುದು.

ಭಾರತೀಯರು ಸಂಸ್ಕೃತದ ನಾಲ್ಕು ವೇದಗಳು ನೂರು ಉಪನಿಷತ್ತುಗಳು ಹದಿನೆಂಟು ಪುರಾಣಗಳು, ರಾಮಾಯಣ, ಮಹಾಭಾರತ, ಭಾಗವತ, ಮಹಾಕಾವ್ಯಗಳು, ನಾಟಕಗಳು, ಪಂಚತಂತ್ರ ಹಿತೋಪದೇಶಗಳಂತಹ ಕಥಾಸಾಹಿತ್ಯಗಳು, ಜಲಶಾಸ್ತ್ರ, ಪಕ್ಷಿಶಾಸ್ತ್ರ, ಇತ್ಯಾದಿಯಾಗಿ 64 ಕಲೆಗಳಿಗೆ ಉತ್ತರಾಧಿಕಾರಿಗಳು. ಈ ಅಧಿಕಾರ ಬೇರೆ ದೇಶದವರಿಗಿಲ್ಲ.

ಮುಸ್ಲಿಮರಿಗೆ ಕುರಾನ್, ಕ್ರಿಶ್ಚಿಯನರಿಗೆ ಬೈಬಲ್, ಆದರೆ ಹಿಂದೂಗಳಿಗೆ ಅನೇಕ ಗ್ರಂಥಗಳ ಸಹಾಯ ಸಿಗುತ್ತದೆ. ''ಏಕಂ ಸತ್‌ವಿಪ್ರಾ, ಬಹುಧಾವದಂತಿ'' ದೇವನೊಬ್ಬ ನಾಮಹಲವು. ಇದು ನಮ್ಮ ಸಂಪ್ರದಾಯ, ಬೇರೆಯವರಿಗೆ 'ದೇವನೊಬ್ಬ ನಾಮ ಒಂದೇ. ಈ ವೈವಿಧ್ಯದಿಂದಲೇ ನಮ್ಮಲ್ಲಿ ಅಭಿಪ್ರಾಯ ಭೇದ ಉಂಟಾಗುತ್ತದೆ.

ಜಗದ್ಗುರು ಶ್ರೀ ಶ್ರೀ ಶ್ರೀ ತ್ರಿಲೋಚನ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ಸಂಸ್ಕೃತದ ಮಹತ್ವವನ್ನು ಹೀಗೆ ವಿವರಿಸಿದರು - ಶಾಸ್ತ್ರ ಪರಂಪರೆಯಲ್ಲಿ ಸಂಸ್ಕೃತವು ತನ್ನದೇ ಆದ ಉನ್ನತ ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಸಂಸ್ಕೃತ ಕೇವಲ ಭಾಷೆಯಲ್ಲ ಮನುಷ್ಯನ ಸಂಸ್ಕಾರ ಹಾಗೂ ಸಂಸ್ಕೃತಿಯಿಂದ ಕೂಡಿರುತ್ತದೆ. ಇದಕ್ಕೆ ನಮ್ಮ ಪ್ರಾಚೀನರ ಉದಾಹರಣೆಯನ್ನು ಕೊಡಬಹುದು. ಪಾಣಿನಿಯು ಮಾಹೇಶ್ವರ ಸೂತ್ರದಿಂದ ವ್ಯಾಕರಣ ಶಾಸ್ತ್ರವನ್ನು ಪ್ರಾರಂಭಿಸಿದನು. ಮಹಾಕವಿ ಕಾಳಿದಾಸನು ವಾಗರ್ಥಾವಿವ

ಸಂಪೃಕ್ತೌ – ಶ್ಲೋಕದಿಂದ ರಘುವಂಶವೆಂಬ ಮಹಾಕಾವ್ಯವನ್ನು ಪ್ರಾರಂಭಿಸಿದನು. ಹೀಗೆ ದಂಡಿ, ಬಾಣ, ಹರ್ಷ, ಇತ್ಯಾದಿ ಕವಿಗಳಿಂದ ಅಂದಿನಿಂದ ಇಂದಿನವರೆಗೂ ತನ್ನ ಸ್ಥಾನವನ್ನು ಉಳಿಸಿಕೊಂಡು ಬಂದಿದೆ ಎಂದರು.

ಸಂಸ್ಕೃತ ಭಾರತೀ ಸಂಘಟನ ಮಂತ್ರಿ ವಿದ್ವಾನ್ ಶ್ರೀ ರಾಮಕೃಷ್ಣ ಭಟ್ಟ ಮಾತನಾಡಿ ಸಂಸ್ಕೃತ ಶಿಕ್ಷಕರು ಸ್ವತಃ ಸಂಸ್ಕೃತದಲ್ಲಿ ಸಂಭಾಷಣೆ ಮಾಡಿ, ಸಂಸ್ಕೃತದಲ್ಲೇ ಪಾಠ ಮಾಡಿ, ಸಂಸ್ಕೃತದ ಜೀವಂತಿಕೆಯನ್ನು ತೋರಿಸಬೇಕಾಗುತ್ತದೆ ಎಂದರು.

ಗುಲ್ಬರ್ಗಾ ವಲಯ ಸಂಸ್ಕೃತ ಪರಿವೀಕ್ಷಕರಾದ ಡಾ|| ಹನುಮಂತರಾವ್ ಜೋಷಿ ಮಾತನಾಡಿ ರಾಮಾಯಣದಲ್ಲಿನ ಆಂಜನೇಯನ ಉದಾಹರಣೆಯನ್ನು ಹೇಳುತ್ತಾರೆ. ಒಂದು ಕಾರ್ಯ ಸಾಧನೆ ಮಾಡುವಾಗ 100 ಕಾರ್ಯಗಳು ಸಿದ್ಧಿಯಾಗಬೇಕು. ಇದು ಉತ್ತಮ ಕಾರ್ಯಕರ್ತೃ ಲಕ್ಷಣ. ಅಲ್ಲದೇ ಒಂದು ಪ್ರಧಾನಕಾರ್ಯ ಮಾಡುವಾಗ ಇನ್ನೊಂದಕ್ಕೆ ಹೋಗಿ ಮೊದಲನೇ ಕೆಲವಸವೇ ಹಾಳಾಗಬಾರದು. ಸಂಸ್ಕೃತ ಕಾರ್ಯಕರ್ತರಾದ ನಾವುಗಳು ಸಂಸ್ಕೃತ ಶ್ವಾಸೋಚ್ಛ್ವಾಸವನ್ನು ಮಾಡೋಣ.

ಕಾರ್ಯಕ್ರಮದಲ್ಲಿ ''ಕರ್ನಾಟಕ ಸಂಸ್ಕೃತ ಶಿಕ್ಷಕರ ಸಂಘ''ದ ಅಧ್ಯಕ್ಷರಾದ ಶ್ರೀ ಬಿ.ಎನ್. ಹೊಸೂರು, ಗುಲ್ಬರ್ಗ ವಲಯ ಸಂಯೋಜಕರಾದ ಶ್ರೀ ಮಲ್ಲನ ಗೌಡ ಎಸ್. ಮಾಲೀಪಾಟೀಲ್, ಶ್ರೀ ಸಿದ್ದೇಶ್ವರ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಎಸ್.ಎಂ. ದಕ್ಷಿಣಾಮೂರ್ತಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶಾಖಾಧಿಕಾರಿಗಳಾದ ಶ್ರೀ ಎಂ. ಶಿವಮೂರ್ತಿ ಭಾಗವಹಿಸಿದ್ದರು.

ಸಂಸ್ಕೃತ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಚಂದ್ರಶೇಖರಯ್ಯ ಹಿರೇಮಠ ಪ್ರಾಸ್ತಾವಿಕ ಭಾಷಣ ಮಾಡಿದರು. ಅಲಂಕಾರ ಶಾಸ್ತ್ರ ಉಪನ್ಯಾಸಕಿಯಾದ ಶ್ರೀಮತಿ ಚನ್ನಮ್ಮ ಕಾರ್ಯಕ್ರಮದ ನಿರೂಪಣೆ ಹಾಗೂ ಸ್ವಾಗತ ಭಾಷಣ ಮಾಡಿದರು.

ಗುಲ್ಬರ್ಗ ವಲಯದ ಸಂಸ್ಕೃತ ಶಿಕ್ಷಕರು ಹಾಜರಿದ್ದು ತಮ್ಮ ಪಾಠಶಾಲಾ ವಿದ್ಯಾರ್ಥಿಗಳಿಂದ ವಿವಿಧ ಸಂಸ್ಕೃತ ಮನೋರಂಜನಾ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

## ಧ್ವಜಾರೋಹಣ

*ದಿನಾಂಕ 15-08-2013 ರಂದು ಬೆಳಿಗ್ಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಧ್ವಜಾರೋಹಣ ಮಾಡಿ ಧ್ವಜವಂದನೆ ಸಲ್ಲಿಸಿ ಸ್ವಾತಂತ್ರ್ಯದ ಮಹತ್ವವನ್ನು ವಿವರಿಸಿದರು. ಸ್ವತಂತ್ರಕ್ಕಾಗಿ ಹೋರಾಡಿದ ಮಹಾತ್ಮರನ್ನು ಸ್ಮರಿಸುವ ಮೂಲಕ ಅವರ ವ್ಯಕ್ತಿತ್ವದಿಂದ ಪ್ರೇರಣೆ ಹೊಂದಿ ರಾಷ್ಟ್ರದ ಸಮಗ್ರತೆಯನ್ನು, ಏಕತೆಯನ್ನು ಯುವಜನತೆ ಉಳಿಸಿಕೊಂಡು ಮುನ್ನಡೆಯಬೇಕು ಎಂದು ಹೇಳಿದರು. ವಿದ್ಯಾರ್ಥಿಗಳು ಪ್ರಾಧ್ಯಾಪಕರು ಸಿಬ್ಬಂದಿವರ್ಗದವರು ಉತ್ಸಾಹದಿಂದ ಭಾಗವಹಿಸಿ ಜಯಘೋಷಗಳನ್ನು ಮೊಳಗಿಸಿ ದೇಶಪ್ರೇಮವನ್ನು ಮೆರೆದರು.*

*ದಿನಾಂಕ : 15-08-2013 ರಂದು ಬೆಳಿಗ್ಗೆ : 08.00 ಘಂಟೆಗೆ ಮಾನ್ಯ ಪ್ರಾಂಶುಪಾಲರಾದ ಡಾ. ಭಾಷ್ಯಂ ಸ್ವಾಮೀಜಿರವರು ಧ್ವಜಾರೋಹಣ ಮಾಡಿ ಧ್ವಜವಂದನೆ ಸಲ್ಲಿಸಿ ಸ್ವಾತಂತ್ರ್ಯದ ಮಹತ್ವವನ್ನು ತಿಳಿಹೇಳಿದರು. ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು ಪ್ರೋತ್ಸಾಹದಿಂದ ಭಾಗ ವಹಿಸಿ ಜಯಘೋಷಗಳನ್ನು ಮೊಳಗಿಸಿ ದೇಶಪ್ರೇಮವನ್ನು ಉಜ್ವಲಗೊಳಿಸಿದರು. ಸಿಹಿ ವಿತರಣೆ ಮಾಡುವುದರ ಮೂಲಕ ಕಾರ್ಯಕ್ರಮವು ಮುಕ್ತಾಯಗೊಂಡಿತು.*

*ದಿ. 26-01-2014 ರಂದು ಬೆಳಿಗ್ಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಕುಲಸಚಿವರಾದ ಪ್ರೊ. ಪಿ.ಬಿ. ಸಂತಪ್ಪನವರ ಅವರು ಧ್ವಜಾರೋಹಣ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಬೇಲಿಮಠದ ಸ್ವಾಮಿಗಳು ಮಾತನಾಡಿ ರಾಷ್ಟ್ರದ ಅಭಿವೃದ್ಧಿಯಲ್ಲಿ ವಿಶ್ವವಿದ್ಯಾಲಯಗಳ ಪಾತ್ರ ಪ್ರಮುಖವಾಗಿವೆ ಎಂದು ಅಭಿಪ್ರಾಯಪಟ್ಟರು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿವರ್ಗವು ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.*

**ಭಾರತದ ಸತ್ವ ಇರುವುದೇ ಸಂಸ್ಕೃತ ಭಾಷೆಯಲ್ಲಿ ,**
**ಜಗತ್ತಿನ ಎಲ್ಲಾ ಸಂಸ್ಕೃತಿಯ ಬೇರಿರುವುದು ಭಾರತದ ಸಂಸ್ಕೃತದಲ್ಲಿ**

– ಶ್ರೀ ನಿರ್ಮಲಾನಂದನಾಥ ಸ್ವಾಮಿಗಳು

**ಭಾರತೀಯ ಗುರು ಶಿಷ್ಯಪರಂಪರೆ ಶ್ರೀ ಆದಿಚುಂಚನಗಿರಿಯಲ್ಲಿ ಉಳಿದಿದೆ.**

– ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಆದಿಚುಂಚನಗಿರಿಯಲ್ಲಿರುವ ಅನುದಾನಿತ ಶ್ರೀ ಕಾಲಭೈರವೇಶ್ವರ ವೇದಾಗಮ ಸಂಸ್ಕೃತ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ ವತಿಯಿಂದ, ಸಾಂಸ್ಕೃತಿ ಕಾರ್ಯಕ್ರಮಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು, ಶ್ರೀಕ್ಷೇತ್ರದ 72ನೇ ನೂತನ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ದಿವ್ಯಸಾನ್ನಿಧ್ಯದಲ್ಲಿ, ಬಿಜಿಎಸ್ ಸಭಾ ಭವನದಲ್ಲಿ ಏರ್ಪಡಿಸಲಾಗಿತ್ತು. ಪ್ರಾಚಾರ್ಯರಾದ ಪ್ರೊ. ಸಿ. ನಂಜುಂಡಯ್ಯರವರು ಪ್ರಾಸ್ತಾವಿಕ ಭಾಷಣ ಮಾಡಿ, ಸಂಸ್ಕೃತ ವೇದಾಗಮ ಶಿಕ್ಷಣದ ಕಲಿಕೆಗೆ ಶ್ರೀಮಠದಲ್ಲಿರುವ ಸೌಲಭ್ಯ ಹಾಗೂ ವಿದ್ವತ್ಪದವಿ ಪಡೆದವರಿಗೆ ಇರುವ ವಿಪುಲ ಉದ್ಯೋಗಾವಕಾಶವನ್ನು ಎಳೆ ಎಳೆಯಾಗಿ ಬಿಡಿಸಿ ಹೇಳಿದರು. ಸಭೆಗೆ ಸರ್ವರನ್ನು ಪರಿಚಯಿಸಿದರು.

ಜ್ಯೋತಿ ಬೆಳಗಿಸುವುದರ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿದ, ಮಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಪ್ರೊ.ಕೆ.ಇ. ರಾಧಾಕೃಷ್ಣನ್‌ರವರು ಮಾತನಾಡಿ, ಪವಿತ್ರ ತಾಣವಾದ ಶ್ರೀಕ್ಷೇತ್ರ ಆದಿಚುಂಚನಗಿರಿ ಪುಣ್ಯಕ್ಷೇತ್ರವಾಗಿದ್ದು, ಆಧ್ಯಾತ್ಮದ ನೆಲೆಯಾಗಿದೆ. ಆಧ್ಯಾತ್ಮದ ನೆಲೆಯಲ್ಲಿ ದೀಪ ಬೆಳಗಿಸುವುದು ಶ್ರೀಗಳವರ ಆಶೀರ್ವಾದದಿಂದ ಸುಲಭದ ಕೆಲಸವೆಂದು ಭಾವಿಸಿದ್ದೇವೆ. ಆದಿಚುಂಚನಗಿರಿ ಮಹಾಸಂಸ್ಥಾನವೇ ಚೈತನ್ಯಮಯವಾದ ದೀಪವಾಗಿದ್ದು, ಅನೇಕ ದೀಪಗಳನ್ನು ಹಚ್ಚುವುದಕ್ಕೆ ಸಮರ್ಥವಾಗಿದೆ. ಸಹಸ್ರಾರು ಮಕ್ಕಳ ಹೃದಯದಲ್ಲಿ ದೀಪವನ್ನು ಹಚ್ಚುತ್ತಿದೆ. ಬೆಳಕನ್ನು ನೀಡುತ್ತಿದೆ. ದೇವಭಾಷೆಯಾದ ಸಂಸ್ಕೃತ, ಸರ್ವಭಾಷಾಮಯಿಯಾಗಿದ್ದು, ಇದರ ಸುಲಭ ಕಲಿಕೆಗೆ ಶ್ರೀಮಠ ಒತ್ತು ಕೊಟ್ಟಿರುವುದು ನಮಗೆಲ್ಲರಿಗೂ ಸಂತೋಷವಾಗಿದೆ ಎಂದರಲ್ಲದೆ, ಮಕ್ಕಳಲ್ಲಿ ಕೀಳರಿಮೆ ಬೇಡ, ಛಲಬೇಕು ಸರ್ವರಿಗೂ ಸಮಾನ ಅವಕಾಶ ಶ್ರೀಮಠದಲ್ಲಿದೆ. ಸಾಂಸ್ಕೃತಿಕ ಚಟುವಟಿಕೆಯಿಂದ ಎಲ್ಲರ ಹೃದಯ ಅರಳಲಿ. ಈ ಎಲ್ಲವೂ ನೂತನ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರಿಂದ ಸಾಧ್ಯವಾಗುತ್ತದೆಂದು ಹೇಳಿದರು.

ಖ್ಯಾತ ಚಲನಚಿತ್ರ ನಿರ್ದೇಶಕರೂ, ನಟರೂ ಆದ ಶ್ರೀ ಕೆ.ಎಸ್.ಎಲ್. ಸ್ವಾಮಿ (ರವೀ)ರವರು ಶೇಕಡ 100% ಫಲಿತಾಂಶ ಪಡೆದ ಸಂಸ್ಕೃತ ಪಾಠಶಾಲಾ ಕಾಲೇಜುಗಳಿಗೆ, ವಿದ್ವತ್ ಪದವೀಧರರಿಗೆ ಪ್ರತಿಭಾ ಪುರಸ್ಕಾರ ವಿತರಣೆ ಮಾಡಿ ಮಾತನಾಡುತ್ತಾ, ಶ್ರೀಮಠದ ವಿದ್ಯಾರ್ಥಿಗಳಿಗೆ ಸಂಸ್ಕಾರ ಜಾಸ್ತಿ, ಈ ಕೆಲಸವನ್ನು ಭೈರವೈಕ್ಯ ಜಗದ್ಗುರುಗಳು ತುಂಬಾ ಚೆನ್ನಾಗಿ ಮಾಡಿದ್ದಾರೆ. ಅದನ್ನೇ ಮುಂದುವರಿಸಿರುವ ನೂತನ ಜಗದ್ಗುರುಗಳು ಕಾರ್ಯಪ್ರವೃತ್ತರಾಗಿದ್ದಾರೆ ಎಂದು ಹೇಳಿದರು.

ಈ ಪವಿತ್ರ ಸಮಾರಂಭದ ಅಧ್ಯಕ್ಷತೆ ವಹಿಸಿದ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು ಮಾತನಾಡಿ, ಸಂಸ್ಕೃತಾಧ್ಯಯನ ಎಲ್ಲರಿಗೂ ಅಗತ್ಯವಾಗಿದ್ದು, ಅದಕ್ಕೆ ಕಂಠಪಾಠ ಅನಿವಾರ್ಯವಾಗಿದೆ ಎಂದು ಡಾ. ಎಸ್.ಕೆ. ರಾಮಚಂದ್ರರಾವ್‌ರವರು ಹೇಳುತ್ತಿದ್ದರೆಂದರಲ್ಲದೆ, ಬಹುದೊಡ್ಡ ವಿದ್ವಾಂಸರಾದ ಇವರಿಂದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು ವೇದೋಪನಿಷತ್ ಪಾಠ ಹೇಳಿಸಿಕೊಂಡ ಶಿಷ್ಯರೆಂಬುದು ಸಂತಸದ ವಿಚಾರವೆಂದರು. ಭಾರತೀಯ ಗುರುಶಿಷ್ಯ ಪರಂಪರೆಯಲ್ಲಿ ಈರ್ವರ ಸಂಬಂಧ ಕೇವಲ ಬದುಕಿನದ್ದಾಗಿರಲಿಲ್ಲ; ಇಂದಿನಂತಿರಲಿಲ್ಲ. ಬದಲಿಗೆ

ಲೋಕೋತ್ತರವಾದುದಾಗಿತ್ತು. ಪರಿಪೂರ್ಣ ಮನುಷ್ಯ ನನ್ನಾಗಿಸುತ್ತಿದ್ದ ಈ ಪರಂಪರೆ ಇಂದಿಗೂ ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ಉಳಿದಿದೆ ಎಂದು ಹೇಳಿದರಲ್ಲದೆ; ಆದ್ದರಿಂದಲೇ ಶ್ರೀಮಠದ ಮೇಲೆ ಎಲ್ಲರಿಗೂ ಪ್ರೀತಿ. ಶ್ರೀಮಠವು ಸಂಸ್ಕೃತ ವಿದ್ಯೆನ್ನು ಪೋಷಿಸುತ್ತಾ ಆಧ್ಯಾತ್ಮ ಜೀವನವನ್ನು ಉದ್ದೀಪಿಸುತ್ತಿದೆ. ಸಂಸ್ಕಾರ ಗೊತ್ತಿದ್ದವರಿಗೆ ಸಂಸ್ಕೃತಿ ಗೊತ್ತಿರುತ್ತದೆ. ಆಗ ಸಂಸ್ಕೃತಿ ಬೆಳೆಯುತ್ತದೆ. ಈ ಕೆಲಸವನ್ನು ಶ್ರೀಮಠ ಮಾಡುತ್ತಿದೆ ಎಂದು ಶ್ಲಾಘಿಸಿದರು. ಸಮತ್ವದ ಸಿದ್ಧಿಗೆ ಸಂಸ್ಕೃತ ಅಧ್ಯಯನ ಬೇಕು. ಈ ಬಗ್ಗೆ ಮಾರ್ಗದರ್ಶನ ಮಾಡಿದವರು ಭೈರವೈಕ್ಯ ಡಾ. ಬಾಲ ಗಂಗಾಧರನಾಥ ಮಹಾಸ್ವಾಮೀಜಿಯವರು. ಪೂಜ್ಯರಿಗಿದ್ದ ಸಂಸ್ಕೃತದ ಕಾಳಜಿ ಅಸಾಮಾನ್ಯವಾದುದ್ದಾಗಿತ್ತು. ಸಂಸ್ಕೃತ ದಿಂದ ಎತ್ತರದ ಸ್ಥಾನಮಾನ, ಹಿರಿಮೆಯನ್ನು ಪಡೆಯುತ್ತೇವೆ. ಎಲ್ಲಾ ದೇಶದವರು ನಮ್ಮನ್ನು ಸಂಸ್ಕೃತಕ್ಕಾಗಿಯೇ ಗೌರವಿಸುತ್ತಾರೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಆಹ್ವಾನಿತ ಗಣ್ಯ ಮಾನ್ಯರನ್ನು, ಅತಿಥಿಗಳನ್ನು ಶಾಲು ಹೊದಿಸಿ ಸನ್ಮಾನಿಸಿ ಆಶೀರ್ವಚನ ನೀಡಿದ, ಶ್ರೀಕ್ಷೇತ್ರಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು, ಶ್ರೀಮಠದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆಯಾಗಿದೆ. ಇದು ಮಕ್ಕಳಲ್ಲಿ ಒಂದು ಬಗೆಯ ಸಂಸ್ಕಾರವನ್ನುಂಟು ಮಾಡಿ, ಸಾಂಸ್ಕೃತಿಕ ಚಟುವಟಿಕೆ ಹೆಚ್ಚಾಗಲಿ, ಭರತಖಂಡದಲ್ಲಿರುವ ಸಂಸ್ಕೃತ ಎಲ್ಲೆಡೆ ತಲೆ ಎತ್ತುವಂತೆ ಮಾಡಿದೆ. ಯಾರು ಅಂತರಂಗದತ್ತ ಮನಸ್ಸು ಮಾಡುತ್ತಾರೋ, ಅವರಿಗೆ ಬೆಳಕಾಗಿ ಬಂದಿರುವುದು ಸಂಸ್ಕೃತ ಭಾಷೆ, ನಮ್ಮ ಶೂದ್ರರಿಗೆ ಸಂಸ್ಕೃತ ಏಕೆ ಬೇಕು? ಎಂದು ಪೂಜ್ಯ ಗುರೂಜಿಯವರನ್ನು ಪ್ರಶ್ನಿಸಿದವರಿಗೆ ಉತ್ತರವಾಗಿ, ಎತ್ತರಕ್ಕೆ ಬೆಳೆಯಲು ಸಂಸ್ಕೃತ ಭಾಷೆ ಬೇಕು. ಎಲ್ಲರೂ ಅಧ್ಯಯನ ಮಾಡಬೇಕಾದುದು ಅತ್ಯಗತ್ಯವೆಂದು ಹೇಳಿದರಂತೆ. ಇದರ ಪರಿಣಾಮ ಇಂದು ಹಿಂದುಳಿದ ಸಮುದಾಯದ ಎಲ್ಲರೂ ವೇದ ಸಂಸ್ಕೃತಾಧ್ಯಯನ ಮಾಡುವಂತಾಯಿತು. ಬದುಕಿಗೆ ಬೆಳಕನ್ನು ಪಡೆಯಲು ಸಾಧ್ಯವಾಯಿತು.

ಶ್ರೀಮಠದಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ಸಂಸ್ಕೃತ ಮತ್ತು ಆಧುನಿಕ ವಿದ್ಯೆ ಎರಡನ್ನೂ ಒಟ್ಟಿಗೆ ಕಲಿಯುತ್ತೀದ್ದೀರಿ. ಇಂದು ಧರ್ಮ ಮತ್ತು ವಿಜ್ಞಾನದ ಸಂಗಮವಾಗಿದೆ ಎಂದರಲ್ಲದೆ, ಈಶಾವಾಸ್ಯ ಉಪನಿಷತ್ತಿನ 'ಈಶಾವಾಸ್ಯಮಿದಂ ಸರ್ವಂ...' ಎಂಬ ಮಂತ್ರ ಬಹುದೊಡ್ಡದು. ಯುರೋಪಿನ ತತ್ತ್ವಜ್ಞಾನಿಯೊಬ್ಬ ತನ್ನ ಬದುಕಿನ ಕೊನೆಗೆ, ನನ್ನ ಬದುಕು ನಿಷ್ಪ್ರಯೋಜನವಾಯಿತು; ಏಕೆಂದರೆ ನನ್ನ ಬದುಕಿನ ಕೊನೆಗೆ ಒಂದು ಗ್ರಂಥ ಲಭ್ಯವಾಯಿತು. ಆದರೆ ಇದು ಆರಂಭದಲ್ಲೇ ಸಿಕ್ಕಿದ್ದರೆ ಒಳ್ಳೆಯದಾಗುತ್ತಿತ್ತು ಎಂದನಂತೆ. ಆ ಗ್ರಂಥವೇ ಈಶಾವಾಸ್ಯ ಉಪನಿಷತ್. ಈ ಪುಣ್ಯಭೂಮಿಯಲ್ಲಿ ಬದುಕುತ್ತಿರುವ ನಾವು ಸಂಸ್ಕೃತವನ್ನು ಓದಲೇಬೇಕು, ಇಲ್ಲದಿದ್ದರೆ ನಮ್ಮ ಜೀವನ ವ್ಯರ್ಥ. ನಮ್ಮ ಸನಾತನ ಧರ್ಮದ ನುಡಿಗಳು ಸತ್ಯವೆಂದು ವಿಜ್ಞಾನ ಸಾರಿರುವುದರಿಂದಲೇ ಸಂಸ್ಕೃತದ ಎಲ್ಲಾ ಗ್ರಂಥಗಳು ಜಗತ್ತಿನ ಉದ್ದಗ್ಗಲಕ್ಕೂ ಹರಡಿವೆ. ಭಾರತದ ಸತ್ವ ಇರುವುದೇ ಸಂಸ್ಕೃತ ಭಾಷೆಯಲ್ಲಿ. ಜಗತ್ತಿನ ಎಲ್ಲಾ ಸಂಸ್ಕೃತಿಯ ಬೇರಿರುವುದು ಭಾರತದ ಸಂಸ್ಕೃತದಲ್ಲಿ ಎಂದು ನುಡಿದರು. ಈ ಸಮಾರಂಭದಲ್ಲಿ ಮಾಯಸಂದ್ರದ ಕಲ್ಪತರು ಆಶ್ರಮದ ಪೂಜ್ಯ ಶ್ರೀ ಶ್ರೀ ಶಿವಕುಮಾರನಾಥ ಸ್ವಾಮಿಗಳವರು ಉಪಸ್ಥಿತರಿದ್ದರು.

## ನೆಟ್ ಪರೀಕ್ಷಾ ಸಿದ್ಧತೆಯ ಕಾರ್ಯಾಗಾರ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ದಿನಾಂಕ 16-12-2013 ರಿಂದ 24-12-2013ರವರೆಗೆ ಯುಜಿಸಿ ಎನ್.ಇ.ಟಿ. ಪರೀಕ್ಷಾ ಪೂರ್ವ ಸಿದ್ಧತಾ ತರಬೇತಿಯನ್ನು ನೀಡಿತು. ಸಂಸ್ಕೃತ ಭಾಷೆಯಲ್ಲಿ ಕರ್ನಾಟಕ ರಾಜ್ಯದಲ್ಲೇ ಪ್ರಥಮಬಾರಿಗೆ ರಾಷ್ಟ್ರೀಯ ಮಟ್ಟದ ಪರೀಕ್ಷಾ ತರಬೇತಿಯನ್ನು ನೀಡಿದೆ. ಸಂಸ್ಕೃತ ಸಾಮಾನ್ಯ ಸಾಂಪ್ರದಾಯಿಕ ಸಂಸ್ಕೃತ (ಕೋಡ್ ಸಂಖ್ಯೆ 73) ಹಾಗೂ ಎನ್.ಇ.ಟಿ.ಯ ಪ್ರಥಮ ಪತ್ರಿಕೆಗೆ ತರಬೇತಿ ನೀಡಲಾಯಿತು.

ಈ ತರಬೇತಿ ಕಾರ್ಯಕ್ರಮಕ್ಕೆ ಅಭೂತಪೂರ್ವ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಅದನ್ನು ತಿಳಿದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರಶಿಕ್ಷಣ ಪರಿಷತ್ತಿನ 10ನೇ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿ ಎನ್.ಇ.ಟಿ. ಪರೀಕ್ಷಾ ತರಬೇತಿ ಕೇಂದ್ರವನ್ನೇ ಪ್ರಾರಂಭಿಸಲು ಅನುಮತಿಯನ್ನು ನೀಡಿತು. ಪ್ರಸಕ್ತ ವರ್ಷದಿಂದಲೇ ಒಂದು ತಿಂಗಳವರೆಗೆ ತರಬೇತಿಯನ್ನು ನೀಡಲು ವಿಶ್ವವಿದ್ಯಾಲಯವು ಆ ನಿಟ್ಟಿನಲ್ಲಿ ಕಾರ್ಯವನ್ನು ಕೈಗೆತ್ತಿಕೊಂಡಿದೆ.

**ಈ ವರ್ಷವೂ ಪ್ರಶಿಕ್ಷಣದ ಅನುಮೋದನೆಯಂತೆ 30 ದಿನಗಳವರೆಗೆ ನಡೆಸಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನಿರ್ಧರಿಸಿದೆ. ಆಸಕ್ತರು ಮೇ ತಿಂಗಳಲ್ಲಿ ನೋಂದಣಿಗೆ ಸಂಪರ್ಕಿಸಬಹುದಾಗಿದೆ. ದೂರವಾಣಿ : ಸಂಖ್ಯೆ 080-26705596.**

# ಪಾಠಶಾಲೆ/ಮಹಾವಿದ್ಯಾಲಯಗಳಲ್ಲಿ ಸಂಸ್ಕೃತೋತ್ಸವ

**ಮಹಾರಾಜಾ ಕಾಲೇಜಿನಲ್ಲಿ ಸಂಸ್ಕೃತೋತ್ಸವ ಹಾಗೂ ಗಣೇಶೋತ್ಸವ**

ದಿನಾಂಕ : 06-09-2013 ರಂದು ಬೆಳಿಗ್ಗೆ : 10.00 ಘಂಟೆಯಿಂದ ಸಂಸ್ಕೃತೋತ್ಸವವನ್ನು ಆಚರಿಸ ಲಾಯಿತು. ಸಂಸ್ಕೃತೋತ್ಸವದ ನಿಮಿತ್ತ ದೇಶಭಕ್ತಿ ಗೀತಗಾಯನ, ವೇದಘೋಷ, ಶಾಸ್ತ್ರವಾಕ್ಯಾರ್ಥ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ಅಧ್ಯಾಪಕ ಸಂಘದ ಸಹಕಾರದಿಂದ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ದಿನಾಂಕ : 13-09-2013 ರಂದು ಅಧ್ಯಾಪಕ ಸಂಘದ ಸಹಕಾರದಿಂದ ಗಣೇಶೋತ್ಸವವನ್ನು ಆಚರಿಸಲಾಯಿತು. ವಿದ್ಯಾರ್ಥಿಗಳು ವಿವಿಧ ಶಾಸ್ತ್ರಗಳಲ್ಲಿ ವಾಕ್ಯಾರ್ಥಸೇವೆಯನ್ನು ತೃಪ್ತಿಕರವಾಗಿ ಸಲ್ಲಿಸಿದರು. ವೇದ ವಿಭಾಗದ ಅಧ್ಯಾಪಕರು ತಮ್ಮ ಶಿಷ್ಯರೊಂದಿಗೆ ವೇದಸ್ವಸ್ತಿ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ನಾರ್ವೆಯಿಂದ ಅನೇಕರು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಕಾರ್ಯದರ್ಶಿಗಳಾದ ಡಾ. ಚಕ್ರವರ್ತಿ ರಾಮಚಂದ್ರನ್ ರವರು ಸ್ವಾಗತಿಸಿದರು. ಪ್ರಾಂಶುಪಾಲರಾದ ಡಾ. ಭಾಷ್ಯಂ ಸ್ವಾಮೀಜಿ ರವರು ಅಧ್ಯಕ್ಷತೆವಹಿಸಿದ್ದರು.

**ಸಂಸ್ಕೃತ ಉತ್ಸವಗಳೆಂದರೆ ಸಂಸ್ಕಾರದ ಉತ್ಸವ**

ದಿನಾಂಕ 21-08-2013 ರಂದು ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ತುಮಕೂರು ಮಂಡಲ ಸಂಸ್ಕೃತಪಾಠಶಾಲಾ ಶಿಕ್ಷಕರ ಸಂಘ ಹಾಗೂ ಗೋಡೆಕೆರೆ ರಂಭಾಪುರ ವಿದ್ಯಾಸಂಸ್ಥೆ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಸಂಸ್ಕೃತೋತ್ಸವ ಸಮಾರಂಭದ ಸಾನಿಧ್ಯವಹಿಸಿ ಮಾತನಾಡಿದ ಕೆರಗೋಡಿ ರಂಗಾಪುರದ ಗುರುಪರದೇಶಿ ಕೇಂದ್ರ ಸ್ವಾಮಿಜಿಗಳು - ಸಂಸ್ಕೃತ ನಮ್ಮ ಮನೆಗೆ ಬಂದಿದೆ. ಮಕ್ಕಳಿಗೆ ಪೋಷಕರು ಸಂಸ್ಕೃತ ಭಾಷೆಯನ್ನು ಕಲಿಸುವ ಮೂಲಕ ಸಂಸ್ಕಾರವಂತರನ್ನಾಗಿ ಮಾಡಬೇಕೆಂದರು.

ರಾಜ್ಯಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಡಾ. ವಿ. ಗಿರೀಶ್‌ಚಂದ್ರ ಮಾತನಾಡಿ, ವಿದೇಶಗಳಲ್ಲೂ ಕೂಡ ಸಂಸ್ಕೃತ ಉತ್ಸವಗಳು ನಡೆಯುತ್ತಿವೆ. ಸಂಸ್ಕೃತ ಉತ್ಸವಗಳೆಂದರೆ ಸಂಸ್ಕಾರದ ಉತ್ಸವ. ಮನುಷ್ಯ ಅರಿಷಡ್ವರ್ಗಗಳನ್ನು ಗೆಲ್ಲುವ ಮೂಲಕ ಪಂಚೇಂದ್ರಿಯಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಸಾತ್ವಿಕ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು.

ತಮ್ಮಡಿಹಳ್ಳಿ ಮಠದ ಡಾ. ಅಭಿನವ ಮಲ್ಲಿಕಾರ್ಜುನ ದೇಶಿಕೇಂದ್ರಸ್ವಾಮಿಗಳು ಸಂಸ್ಕೃತ ಮತ್ತು ಸಂಸ್ಕೃತಿಗೆ ಇರುವ ಸಂಬಂಧವನ್ನು ತಿಳಿಸದರು. ಸಿದ್ದಲಿಂಗೇಶ್ವರ ಸಂಸ್ಕೃತಪಾಠಶಾಲಾ ಪ್ರಾಂಶುಪಾಲರಾದ ಡಿ.ಎಸ್. ಚಂದ್ರಶಾಖರಯ್ಯರವರು ಉಪನ್ಯಾಸ ನೀಡಿದರು. ತಾ.ಪಂ. ಮಾಜಿ ಅಧ್ಯಕ್ಷ ಎಂ.ಎಂ. ಜಗದೀಶ್, ಜಿ.ಪಂ. ಸದಸ್ಯ ಎಚ್.ಬಿ. ಪಂಚಾಕ್ಷರಿ, ಕಾರ್ಯದರ್ಶಿ ಎಮ್.ಸಿ. ಭೋಜಯ್ಯ, ಚಿತ್ರದುರ್ಗವಲಯದ ಸಂಸ್ಕೃತ ಪರಿವೀಕ್ಷಕ ಬಿ.ಆರ್. ಗಂಗಾಧರ್, ಸಂಯೋಜಕ ವಿದ್ವಾನ್ ಸಿ.ಜೇ. ಶಂಕರಗೌಡ ಎಲ್ಲ 48 ಸಂಸ್ಕೃತ ಶಾಲೆಯ ಶಿಕ್ಷಕರು ಈ ಸಮಾರಂಭದಲ್ಲಿದ್ದರು.

ಗೋಡೆಕೆರೆ ಸಿದ್ದರಾಮದೇಶಿಕೇಂದ್ರಸ್ವಾಮಿ ಮಾತನಾಡಿ, ಭಾರತದಲ್ಲಿ ಹುಟ್ಟಿರುವ ನಾವು ಸಂಸ್ಕಾರವಂತರಾಗಿ ಸಂಸ್ಕೃತವನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಬೆಂಗಳೂರಿನ ವಿಜಯನಗರದ ಭಾರತೀಯ ಸಂಸ್ಕೃತಿ ವಿದ್ಯಾಪೀಠ ಸಂಸ್ಕೃತ ಪಾಠಶಾಲೆಯಲ್ಲಿ 23-08-2013 ರಂದು ಸಂಸ್ಕೃತೋತ್ಸವವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಡಾ|| ವಿ. ಗಿರೀಶ ಚಂದ್ರರವರು ಆಗಮಿಸಿದ್ದರು. ವಿದುಷಿ ಕೆ. ಸುಧಾಮಣಿ ಯವರು ಸಂಸ್ಕೃತ ಭಾಷೆಯ ಕುರಿತು ವಿದ್ಯಾರ್ಥಿಗಳನ್ನು ದ್ದೇಶಿಸಿ ಮಾತನಾಡಿದರು. ಡಾ|| ನಾಗೇಶ್ ಹತಾರ್ ಸ್ಮರಣಾರ್ಥ ವಿಷ್ಣು ಸಹಸ್ರನಾಮ ಕಂಠಪಾಠ ಸ್ಪರ್ಧೆಯಲ್ಲಿ

## ಪರೀಕ್ಷಾ ಪೂರ್ವಸಿದ್ಧತಾ ಕಾರ್ಯಾಗಾರ

ದಿನಾಂಕ *17-01-2014*ರಂದು ಗದಗ ಶಹರದ ಸಂಸ್ಕೃತ ಪಾಠಶಾಲೆಗಳ ವತಿಯಿಂದ ಪರೀಕ್ಷಾ ಪೂರ್ವಸಿದ್ಧತಾ ಕಾರ್ಯಾಗಾರ ಹಾಗು ಸರಸ್ವತಿಪೂಜಾ ಸಮಾರಂಭ ಏರ್ಪಡಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಎನ್.ಎನ್. ಭಟ್ ನಿವೃತ್ತ ಮುಖ್ಯೋಪಾಧ್ಯಾಯರು, ಗದಗ, ನಿವೃತ್ತ ಮುಖ್ಯ ಗುರುಮಾತೆಯಾದ ಶ್ರೀಮತಿ ಲಲಿತಾ ಕೆರಿಮನಿ, ಹಾಗು ತೋಂಟದಾರ್ಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೊಟ್ರೇಶ ಮೆಣಸಿನಕಾಯಿಯವರು ವಿದ್ಯಾರ್ಥಿ ಗಳಿಗೆ ಪರೀಕ್ಷೆಯ ಸಿದ್ಧತೆ ಹಾಗು ಎದುರಿಸುವ ಕೌಶಲವನ್ನು ತಿಳಿಸಿಕೊಟ್ಟರು. ಶ್ರೀ ಜ. ತೋ. ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ವಿ. ಹಿರೇಮಠರವರು ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ವಿಜೇತರಾದವರಿಗೆ ಡಾ|| ಗಿರೀಶ್ ಚಂದ್ರರವರು ಬಹುಮಾನವನ್ನು ವಿತರಿಸಿದರು. ಸಂಸ್ಕೃತಪಾಠಶಾಲೆಯ ವಿದ್ಯಾರ್ಥಿಗಳು ಸಂಸ್ಕೃತದಲ್ಲಿ ರೂಪಕ, ಸಂಸ್ಕೃತ ಗೀತೆ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಡಾ|| ಗಿರೀಶ್ ಚಂದ್ರರವರನ್ನು ಸಂಸ್ಥೆಯವತಿಯಿಂದ ವಿಜಯ ಹಾವನೂರು ಮತ್ತು ಕೆ.ಆರ್. ಕೃಷ್ಣಮೂರ್ತಿಯವರು ಸನ್ಮಾನಿಸಿದರು. ಡಾ|| ಗಿರೀಶ್‌ಚಂದ್ರರವರು ಮಾತನಾಡಿ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಮತ್ತು ಭಾರತೀಯ ಸಂಸ್ಕೃತಿ ವಿದ್ಯಾಪೀಠವು ಸಂಸ್ಕೃತ ಕಲಿಕೆಗೆ ನೀಡುತ್ತಿರುವ ಪ್ರೋತ್ಸಾಹವನ್ನು ಶ್ಲಾಘಿಸಿದರು.

ಆರಂಭದಲ್ಲಿ ಮುಖ್ಯೋಪಾಧ್ಯಾಯ ಶ್ರೀ ವಿಜಯ ಹಾವನೂರರು ಪ್ರಾಸ್ತಾವಿಕ ಭಾಷಣ ಮಾಡಿದರು.

ಪ್ರೌಢಶಾಲಾ ಮುಖ್ಯಶಿಕ್ಷಕ ಎನ್ ನಾರಾಯಣ ಸ್ವಾಮಿರವರು ಉಪಸ್ಥಿತರಿದ್ದರು.

**ಸಂಸ್ಕಾರದ ಮಹತ್ವ ಸಂಸ್ಕೃತದಿಂದಲೇ ತಿಳಿಯಬೇಕು**

ದಿನಾಂಕ 23-08-2013 ರಂದು ಹಾಸನ ಸಂಸ್ಕೃತ ಸಂಘದ ಸಂಸ್ಕೃತ ಪಾಠಶಾಲೆಯಲ್ಲಿ ನಡೆದ ''ಸಂಸ್ಕೃತೋತ್ಸವ ಮತ್ತು ಸಂಸ್ಕೃತ ಸಂಧ್ಯಾದ'' ಪ್ರಥಮ ದೀಕ್ಷಾ ಕಾರ್ಯಕ್ರಮ ಉದ್ಘಾಟನೆ ಮಾಡಿದ ಸಂಸ್ಕೃತ ಸಂಘದ ಹಿರಿಯ ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಶ್ರೀಕಂಠಯ್ಯನವರು ಸಂಸ್ಕೃತ ಸಂಸ್ಕಾರವನ್ನು ನೀಡುತ್ತದೆ. ಅಂತೆ ಎಲ್ಲರೂ ಸಂಸ್ಕೃತ ಕಲಿಯಬೇಕು ಎಂದು ತಿಳಿಸಿದರು. ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡಿದ ಹಾಸನದ ಎಸ್.ಡಿ.ಎಂ. ಆಯುರ್ವೇದ ಕಾಲೇಜಿನ ಡೀನ್‌ರಾದ ಡಾ|| ಮಲ್ಲಿಕಾ ಕೆ.ಜೆ.ರವರು ಸಂಸ್ಕೃತ ಸಂಘದ ಉದ್ದೇಶಗಳನ್ನು ಕಾರ್ಯಕ್ರಮಗಳನ್ನು ಶ್ಲಾಘಿಸಿ ತಮ್ಮ ಕಾಲೇಜಿನ ವೈದ್ಯ ವಿದ್ಯಾರ್ಥಿಗಳು ಸಂಸ್ಕೃತ ಪಾಠಶಾಲೆಯ ಫಲಾನುಭವಿಗಳು ಆಗಿದ್ದಕ್ಕೆ ಸಂತಸ ವ್ಯಕ್ತಪಡಿಸಿ ಎಲ್ಲ ಸಹಕಾರ ನೀಡುವ ಭರವಸೆ ನೀಡಿದರು.

ಮನುಷ್ಯ ತಾಯಿ ಗರ್ಭದಲ್ಲಿರುವಾಗಲೇ ಆ ತಾಯಿಗೆ ಸೀಮಂತ ಮಾಡುವ ಸಂದರ್ಭದಲ್ಲಿ ಪುರೋಹಿತರು ಸಂಸ್ಕೃತ ಭಾಷೆಯಲ್ಲಿ ಮಂತ್ರಗಳನ್ನು ಹೇಳುವ ಮೂಲಕ ಭಾರತೀಯರ (ಹಿಂದೂಗಳ) ಭವ್ಯ ಬದುಕು ಆರಂಭವಾಗುತ್ತದೆ. ಅದು ಹಾಗೆ ಮುಂದುವರೆದು ಜಾತಕರ್ಮ, ಮುಂಜಿ ಅಥವಾ ಉಪನಯನ, ಮದುವೆ ಕೊನೆಗೆ ಅಪರಕರ್ಮದವರೆಗೂ ಸಂಸ್ಕೃತ ಭಾಷೆಯ ಮಂತ್ರಗಳಿಂದಲೇ ಬದುಕಿನ ಸಂಸ್ಕಾರ ಕಾರ್ಯಗಳು ನಡೆಯುತ್ತವೆ. ಆದರೆ ಆ ಸಂಸ್ಕಾರಕ್ಕೊಳಗಾಗುವ ನಮಗೆ ಆ ಪುರೋಹಿತರು ಏನು ಹೇಳುತ್ತಾರೆ ಎಂಬುದು ತಿಳಿಯದೇ ಇರುವುದು ವಿಪರ್ಯಾಸ. ಅಂತೆ ನಮ್ಮ ಸಂಸ್ಕಾರದ ಸಂಗತಿಯನ್ನು ತಿಳಿಯಲಿಕ್ಕಾದರೂ ನಾವು ಸಂಸ್ಕೃತವನ್ನು ಓದಬೇಕು ಎಂದು ಸಂಸ್ಕೃತ ಸಂಘದ ಕಾರ್ಯದರ್ಶಿಗಳು ಮತ್ತು ಲೇಖಕರೂ ಆದ ಶ್ರೀ ಚಂದ್ರಕಾಂತ ಪಡೇಸೂರರವರು ಅಧ್ಯಕ್ಷೀಯ ನುಡಿಗಳನ್ನಾಡಿದರು.

ಕುಮಾರಿ ಯಶಸ್ವಿನಿ ಹೆಚ್.ಎಲ್. ಇವಳು ಪ್ರಾರ್ಥನೆ ಮಾಡಿದಳು. ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ|| ಪ್ರಿಯಾಂಕ ಇವರು ಸ್ವಾಗತಿಸಿದರು. ಡಾ|| ಶ್ರೀಹರ್ಷ ಇವರ ನಿರೂಪಣೆಯಲ್ಲಿ ಸೊಗಸಾಗಿ ನಡೆದು ಬಂದ ಕಾರ್ಯಕ್ರಮ ಡಾ|| ಶ್ವೇತಾ ಇವರ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.








**ವಿದ್ಯಾರ್ಥಿಗಳಿಗೆ ಸೂಕ್ತ ಭಾಷಾಬೋಧನೆ ಮಾಡುವ ಹೊಣೆ ಶಿಕ್ಷಕರ ಮೇಲಿದೆ**

ಶ್ರೀ ದೇಗುಲಮಠದ ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು ಹಾಗೂ ಸಂಸ್ಕೃತ ಪಾಠಶಾಲೆಯ ಆಶ್ರಯದಲ್ಲಿ ನಡೆದ ಸಂಸ್ಕೃತೋತ್ಸವವು ಶ್ರೀ ಕ್ಷೇತ್ರಾಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳ ದಿವ್ಯ ಸಾನಿಧ್ಯದಿಂದ ಪ್ರಾರಂಭಿಸಲ್ಪಟ್ಟು, ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜಿನ ಪ್ರಾಚಾರ್ಯರಾದ ಡಾ. ವಿದ್ವಾನ್ ಎಸ್. ಮಲ್ಲನಗೌಡರು ಸ್ವಾಗತಿಸಿದರು. ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಎ. ಮುರಿಗೆಪ್ಪರವರು ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿ ಮಾತನಾಡುತ್ತಾ 'ಸಂಸ್ಕೃತ ಭಾಷೆಯ ಕಲಿಕೆಯಿಂದ ಮಕ್ಕಳಲ್ಲಿ ಸಂಸ್ಕೃತಿಯ ಸಂಸ್ಕಾರ ಮೂಡುತ್ತದೆ. ಸಂಸ್ಕಾರವಿದ್ದಾಗ ಬದುಕು ಉತ್ತಮವಾಗುತ್ತದೆ. ರಾಜ್ಯದಲ್ಲಿ ಸಂಸ್ಕೃತ ವಾತಾವರಣ ನಿರ್ಮಿಸುವಲ್ಲಿ ಮಠಗಳ ಪಾತ್ರ ಮುಖ್ಯವಾಗಿದೆ. ಮಠಮಾನ್ಯಗಳು ಇಲ್ಲದಿದ್ದರೆ ಸಂಸ್ಕೃತ ಅಧ್ಯಯನ ಶಾಲೆಗಳಿಗೆ ಅವಕಾಶ ಇರುತ್ತಿರಲಿಲ್ಲ' ಎಂದು ಹೇಳಿದರು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರಿಂದ ಶ್ರೀನಿರ್ವಾಣ ಸ್ವಾಮಿ ಕೃಪಾ ವಿದ್ಯಾಪೀಠದ ಆಡಳಿತಾಧಿಕಾರಿಗಳಾದ ಶ್ರೀ. ಟಿ. ಬಸವರಾಜರವರು ಸಮಾಜದ ಅಭಿವೃದ್ಧಿಗೆ ಸಂಸ್ಕೃತ ಶಿಕ್ಷಣವು ಬಹಳ ಸಹಕಾರಿಯುತವಾಗಿದೆ ಎಂದು ನುಡಿದರು. ನಂತರ ಅಧ್ಯಕ್ಷೀಯ ಭಾಷಣವನ್ನು ಮಾಡಿದಂತಹ ಕರ್ನಾಟಕ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಗೌರವಾಧ್ಯಕ್ಷರಾದ ವಿದ್ವಾನ್ ಶ್ರೀ ಚಂದ್ರಶೇಖರಯ್ಯನವರು ವಿದ್ಯಾರ್ಥಿಗಳನ್ನು ದ್ದೇಶಿಸಿ ಸಂಸ್ಕೃತ ಭಾಷೆಯನ್ನು ಕಲಿಯುವಂತೆ ಪ್ರೋತ್ಸಾಹದ ನುಡಿಗಳನ್ನು ಆಡುತ್ತಾ ಭಾಷೆಯ ಮಹಿಮೆಯನ್ನು ಅಚ್ಚುಕಟ್ಟಾಗಿ ತಿಳಿಸಿಕೊಟ್ಟರು.

ಎರಡನೆಯ ದಿನ ಉಪನ್ಯಾಸ ಮಾಲಿಕೆಯಲ್ಲಿ ಖ್ಯಾತ ವಿದ್ವಾಂಸರುಗಳಾದ ವಿದ್ವಾನ್ ಶ್ರೀ ಕೆ. ಬಸವರಾಜು, ಡಾ. ವಿನಾಯಕ ಆಚಾರ್ಯ ನಾಮಣ್ಣನವರ್, ಡಾ. ರಾಘವೇಂದ್ರ ಭಟ್ಟ, ವಿದ್ವಾನ್ ಶ್ರೀ ರವಿಚಂದ್ರ ಈ ಪ್ರಾಧ್ಯಾಪಕರುಗಳಿಂದ ಹಲವು ವಿಷಯಗಳ ಕುರಿತು ಶ್ರೀ ಡಿ. ಯೋಗೇಶ ಹಾಗೂ ಶ್ರೀ ಶಿವಯ್ಯನವರ ಅಧ್ಯಕ್ಷತೆಯಲ್ಲಿ ವಿಚಾರ ಸಂಕೀರ್ಣಗಳು ನಡೆಯಲ್ಪಟ್ಟವು. ಸಂಸ್ಕೃತ ಭಾಷೆಯ ಮಹತ್ವಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನವನ್ನು ಸಹ ಏರ್ಪಡಿಸಲಾಗಿತ್ತು. ಇದು ಭಾಷೆಯ ಸಾಂಸ್ಕೃತಿಕ ಕೊಡುಗೆಗೆ ಪ್ರತ್ಯಕ್ಷ ಸಾಕ್ಷಿ ಎಂಬಂತೆ ಇತ್ತು.

ಮೂರನೆಯ ದಿನದ ಸಮಾರೋಪ ಸಮಾರಂಭವು ಪರಮಪೂಜ್ಯ ಶ್ರೀ ಶ್ರೀ ಮುಮ್ಮಡಿ ಮಹಾಲಿಂಗಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಯಶಸ್ವಿಯಾಗಿ ಜರುಗಿತು. ಶ್ರೀ ದೇಗುಲ ಮಠದ ಶ್ರೀ ದೇಗುಲ ಪ್ರಭೆ ಮಾಸಪತ್ರಿಕೆಯ ಸಂಪಾದಕರಾದ ಡಾ. ಸಿ. ಶಿವಕುಮಾರ ಸ್ವಾಮಿಯವರು ಸಮಾರೋಪದ ಭಾಷಣ ಮಾಡುತ್ತಾ ಶಿಕ್ಷಕರು ವಿದ್ಯಾರ್ಥಿಗಳಾಗಿ ಅಧ್ಯಯನ ಮಾಡಬೇಕು, ಸಂಸ್ಕೃತ ಭಾಷೆಯಲ್ಲಿರುವ ಹಲವಾರು ಗ್ರಂಥಗಳನ್ನು ಓದಿ ಮಕ್ಕಳಿಗೆ ಸೂಕ್ತ ರೀತಿಯಲ್ಲಿ ಬೋಧನೆಯನ್ನು ಮಾಡಬೇಕು ಅದರ ಹೊಣೆ ಶಿಕ್ಷಕರ ಮೇಲಿದೆ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದಂತಹ ಬೆಂಗಳೂರು ವಲಯದ ವಿಷಯ ಪರಿವೀಕ್ಷಕರಾದ ವಿದ್ವಾನ್ ಶ್ರೀ ವಿಜಯ ಹಾವನೂರ ಮಾತನಾಡಿ ಸಂಸ್ಕೃತ ಭಾಷೆಯ ಅಭಿವೃದ್ಧಿಗೆ ಇಂತಹ ಉತ್ಸವಗಳು ನಡೆದರೆ ಮಾತ್ರ ಸಂಸ್ಕೃತ ಭಾಷೆಯ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ನಿರ್ದೇಶನಾಲಯದ ನಿರ್ದೇಶಕರಾದ ಡಾ. ಗಿರೀಶ್ಚಂದ್ರರವರು ಮಾತನಾಡಿ, ''ದ್ರಾವಿಡ ಭಾಷೆಗಳ ಬೆಳವಣಿಗೆಗೆ ಸಂಸ್ಕೃತ ಭಾಷೆ ತುಂಬಾ ಸಹಕಾರಿ. ಸಂಸ್ಕೃತಕ್ಕೆ ತನ್ನದೇಯಾದ ಚಾರಿತ್ರಿಕ ಹಿನ್ನಲೆಯಿದೆ. ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಸಂಸ್ಕೃತ ಪದಗಳ ಪ್ರಭಾವ ಕಂಡುಬರುತ್ತದೆ'' ಎಂದರು. ಐಕ್ಯಮಂತ್ರದೊಂದಿಗೆ ಕಾರ್ಯಕ್ರಮವು ಮುಕ್ತಾಯ ವಾಯಿತು.



ಭಾರತೀಯ ಸಂಸ್ಕೃತ ವಿದ್ಯಾಪೀಠ (ಚಾಮರಾಜಪೇಟೆ) ಪಾಠಶಾಲೆಯ ವತಿಯಿಂದ ದಿನಾಂಕ 31-08-2013 ಶನಿವಾರದಂದು **ಸರ್ವೋತ್ತಮ ಪ್ರೌಢಶಾಲೆಯ** ಆವರಣದಲ್ಲಿ ಸಂಸ್ಕೃತ ಪಾಠಶಾಲಾವತಿಯಿಂದ ಸಂಸ್ಕೃತೋತ್ಸವವನ್ನು ಆಚರಿಸಲಾಯಿತು. ಸಂಸ್ಥೆಯ ಆಡಳಿತಾಧಿಕಾರಿಯಾದ ಶ್ರೀಮತಿ ಉಷಾ ಆಚಾರ್ಯ ಅವರು ಉತ್ಸವದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು.

ಸಂಸ್ಕೃತ ಪಾಠಶಾಲೆಯ ಮಕ್ಕಳು ಸಂಸ್ಕೃತದಲ್ಲಿ ಲಘು ನಾಟಕ, ಸಂಸ್ಕೃತ ಪದ್ಯ ಹಾಗೂ ಪಂಚಾಂಗದ ವಿವರಣೆಯನ್ನು ನೀಡಿದರು. ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯಿನಿ ಯಾದ ಶ್ರೀಮತಿ ನಾಗವಲ್ಲೀ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಎಲ್ಲಾ ಭಾಷೆಗಳಿಗೂ ಮುಖ್ಯ ಭಾಷೆಯಾಗಿರುವುದರಿಂದ ಎಲ್ಲರು ಸಂಸ್ಕೃತ ಕಲಿಯಬೇಕೆಂದು ಪ್ರೋತ್ಸಾಹಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಉಷಾ ಆಚಾರ್ಯರವರು ಸಂಸ್ಕೃತವನ್ನು ಕಂಠ ಪಾಠಮಾಡುವುದರಿಂದ ಏಕಾಗ್ರತೆ ಹೆಚ್ಚುತ್ತದೆ ಈ ಭಾಷೆಯನ್ನು ಎಲ್ಲರೂ ಕಲಿಯಬೇಕು ಮತ್ತು ಸಂಸ್ಕೃತವನ್ನು ಬೆಳಸಿ ಎಂದು ಹಿತವಚನವನ್ನು ನೀಡಿದರು.

**ವಾರ್ಷಿಕೋತ್ಸವ ಹಾಗೂ ಸಂಸ್ಕೃತೋತ್ಸವ**

ದಿನಾಂಕ 31-08-2013 ಶನಿವಾರದಂದು ಧಾರವಾಡದ ಮಾಳಮಡ್ಡಿಯ ಶ್ರೀ ವನವಾಸಿ ರಾಮಮಂದಿರ ಸಂಸ್ಕೃತ ಪಾಠಶಾಲೆಯಲ್ಲಿ ವಾರ್ಷಿಕೋತ್ಸವ ಹಾಗೂ ಸಂಸ್ಕೃತೋತ್ಸವ ವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಪಂಡಿತ ಸತ್ಯನಾರಾಯಣಾಚಾರ್ಯ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪಂಡಿತರು ವಿದ್ಯಾರ್ಥಿಗಳಿಗೆ ಹಿತವಚನ ನೀಡುತ್ತ ಸಂಸ್ಕೃತವು ಸರ್ವಭಾಷೆಗಳಿಗೆ ಜನನಿ ಇದನ್ನು ಅಭ್ಯಸ ಮಾಡುವುದರಿಂದ ಪಾಂಡಿತ್ಯ ಹೆಚ್ಚಾಗಿ ಧಾರ್ಮಿಕ



ಭಾವನೆಯುಂಟಾಗುತ್ತದೆ ಎಂದು ಎಲ್ಲರಿಗೂ ಮನಮುಟ್ಟು ವಂತೆ ತಿಳಿಸಿದರು. ಇನ್ನೋರ್ವ ಅತಿಥಿಗಳಾಗಿದ್ದ ಧಾರವಾಡ ವಲಯ ಸಂಯೋಜಕರಾದ ವಿದ್ವಾನ್ ಬಸವರಾಜ ಆರೇರ ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತ ಸಂಸ್ಕೃತಾಧ್ಯಯನದಿಂದ ಮಾತ್ರ ನಮ್ಮ ಸಂಸ್ಕೃತಿ ಉಳಿಯಲು ಬೆಳೆಯಲು ಸಾಧ್ಯ ಎಂದು ವಿವರಿಸಿದರು. ವನವಾಸಿ ಶ್ರೀರಾಮದೇವ ಟ್ರಸ್ಟಿನ ಧರ್ಮದರ್ಶಿಗಳಾದ ಶ್ರೀ ಆರ್.ಪಿ. ಕುಲಕರ್ಣಿಯವರು ಅಧ್ಯಕ್ಷರಾಗಿದ್ದರು. ಅವರು ಮಾತನಾಡುತ್ತ ಇಂಥ ಕಾರ್ಯಕ್ರಮಗಳಿಂದಲೇ ಸಮಾಜದಲ್ಲಿ ಸಂಸ್ಕೃತಭಾಷೆ ಬೆಳೆಯಲು ಸಾಧ್ಯ. ಇಂತಹ ಕಾರ್ಯಕ್ರಮಗಳಿಗೆ ನಮ್ಮ ಸಂಸ್ಥೆಯು ಯಾವಾಗಲೂ ಎಲ್ಲರೀತಿಯ ಸಹಾಯ ಹಾಗೂ ಸಹಕಾರ ನೀಡಲು ಸಿದ್ಧ ಎಂದು ಹೇಳಿದರು. ಪ್ರಥಮಾ ಹಾಗೂ ಕಾವ್ಯ ವಿದ್ಯಾರ್ಥಿಗಳಿಗೆ ಅತಿಥಿಗಳಿಂದ ಪ್ರಶಸ್ತಿಪತ್ರ ಪಾರಿತೋಷಕ ವಿತರಿಸಲಾಯಿತು. ವಾರ್ಷಿಕೋತ್ಸವ ಹಾಗು ಸಂಸ್ಕೃತೋತ್ಸವದ ಅಂಗವಾಗಿ ಸಂಸ್ಕೃತ ಭಾಷಣ, ಸುಭಾಷಿತ, ಸಂಭಾಷಣ, ಸಂಸ್ಕೃತ ಗೀತಗಾಯನ ಸಂಸ್ಕೃತದ ಗರಿಮೆಯನ್ನು ಸಾರುವ ಭಾಷಣಗಳನ್ನು ಪಾಠಶಾಲೆಯ ವಿದ್ಯಾರ್ಥಿಗಳು ನಡೆಸಿಕೊಟ್ಟರು.



**ತಾಂತ್ರಿಕ ಅಂಶಗಳನ್ನು ಜಗತ್ತಿಗೆ ಮೊದಲು ತಿಳಿಸಿಕೊಟ್ಟ ಭಾಷೆ ಸಂಸ್ಕೃತ**

ದಿನಾಂಕ 14-09-2013 ರಂದು ಮುಂಜಾನೆ 11.30 ಕ್ಕೆ ಸಂಸ್ಕೃತೋತ್ಸವ ಕಾರ್ಯಕ್ರಮವು ಆರಂಭಗೊಂಡಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಣೇಬೆನ್ನೂರು ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ವೈ. ಸಾವಕಾರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಅಂಚೆ ಪ್ರಧಾನರಾದ ಶ್ರೀ ವ್ಹಿ.ಆರ್. ಜೋಶಿಯವರು ಆಗಮಿಸಿದ್ದರು. ಆಡಳಿತಾಧಿಕಾರಿಗಳಾದ ಶ್ರೀ ಎಲ್.ಎಸ್. ಕುಡುಪಲಿಯವರು, ಬಿ.ಕೆ. ಗುಪ್ತಾ ಸಂ.ಪ.ಪೂರ್ವ ಮಹಾವಿದ್ಯಾಲಯದ ಉಪ-ಪ್ರಾಚಾರ್ಯರಾದ ಶ್ರೀ ಎಸ್.ಬಿ. ಗುಡಿಹಾಳರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

24

2012-13 ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ನಡೆದ ಸಂಸ್ಕೃತ ಪ್ರಥಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ಹಾಗೂ ಅತಿಥಿಗಳಿಂದ ಪ್ರಮಾಣಪತ್ರಗಳನ್ನು ಕೊಡಿಸಿದರು.

ಅತಿಥಿಗಳಾದ ಶ್ರೀ ವಿ.ಆರ್. ಜೋಶಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಸಮಸ್ತ ಭಾಷೆಗಳ ಮಾತೃಭಾಷೆ ಎನಿಸಿದ ಸಂಸ್ಕೃತ ಭಾಷೆಯು ದೇವಭಾಷೆಯಾಗಿದೆ. ವೈಜ್ಞಾನಿಕ ಅಂಶಗಳನ್ನು, ತಾಂತ್ರಿಕ ಅಂಶಗಳನ್ನು ಜಗತ್ತಿಗೆ ಮೊದಲು ತಿಳಿಸಿಕೊಟ್ಟ ಭಾಷೆ ಈ ಸಂಸ್ಕೃತ ಭಾಷೆ. ಎಲ್ಲ ವಿಷಯಗಳಿಗೂ ಮೂಲಪ್ರಮಾಣಗಳಾದ ವೇದಗಳು ಈ ಭಾಷೆಯಲ್ಲಿವೆ. ಈ ಸಂಸ್ಕೃತ ಭಾಷೆ ಯಾವದೇ ಒಂದು ಜನಾಂಗಕ್ಕೆ ಸೀಮಿತವಾದ ಭಾಷೆ ಅಲ್ಲ ಸರ್ವಸತ್ವದಿಂದ ಕೂಡಿದ ಸಂಸ್ಕಾರಸಂಪನ್ನವಾದ ಈ ಭಾಷೆ ಇನ್ನೂ ಹೆಚ್ಚು ಹೆಚ್ಚು ಬೆಳೆಯಬೇಕು ಎಂದು ನುಡಿದರು. ವಿದ್ಯಾರ್ಥಿನಿಯರು ''ಶ್ವಶ್ರಾಃ ಯಾಜಮಾನ್ಯಂ'' ಹಾಗು ''ಪಾಯಸ ಪ್ರಹಸನಂ'' ಎಂಬ ರೂಪಕಗಳನ್ನು ಕೌಶಲಪೂರ್ಣವಾಗಿ ಮಾಡಿದರು.

ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಶ್ರೀನಿವಾಸ ಸಾವಕಾರವರು ಸಂಸ್ಕೃತ ಭಾಷೆಯ ಮಹತ್ವವನ್ನು ತಿಳಿಸುತ್ತಾ ಇನ್ನೂ ಹೆಚ್ಚು ಹೆಚ್ಚು ಮಕ್ಕಳು ಈ ಭಾಷೆಯನ್ನು ಕಲಿತು ಸುಸಂಸ್ಕೃತರಾಗಬೇಕು. ಅಧ್ಯಯನಕ್ಕೆ ಬೇಕಾದ ಸಕಲ ವ್ಯವಸ್ಥೆಯನ್ನು ಮಾಡಿಕೊಡುವುದಾಗಿ ಹೇಳುತ್ತಾ ಎಲ್ಲಾ ಮಕ್ಕಳಿಗೂ ಅಭಿನಂದಿಸಿ ಶುಭಹಾರೈಸಿದರು.

ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ಟಿ. ನಾಡಿಗೇರ ಹಾಗೂ ಪ್ರೌಢಶಾಲಾ ಸಂಸ್ಕೃತ ಶಿಕ್ಷಕರಾದ ಶ್ರೀ ಟಿ.ಎಮ್. ಭಟ್ ಕಾರ್ಯಕ್ರಮವನ್ನು ಸಂಘಟಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.



**ಸಂಸ್ಕೃತಾಧ್ಯಯನದಿಂದ ನೈಜ ಭಾರತದ ಅರಿವು ಸಾಧ್ಯ**

ಶ್ರೀಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಕಾಲೇಜು ಬೆಕ್ಕಿನಕಲ್ಮಠ ಹಾಗು ಶಿವಮೊಗ್ಗ ಜಿಲ್ಲಾ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 15-09-2013 ರಂದು ಶ್ರೀ ಬೆಕ್ಕಿನಕಲ್ಮಠ ಶಿವಮೊಗ್ಗದಲ್ಲಿ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳಿಗೆ ಒಂದು ದಿನದ ಕಾರ್ಯಗಾರ ಹಾಗೂ ಪಾಠಶಾಲಾ ವಿದ್ಯಾರ್ಥಿಗಳಿಗೆ, ವಿವಿಧ ಸ್ಪರ್ಧೆಗಳು ಮತ್ತು ಸಂಸ್ಕೃತೋತ್ಸವವನ್ನು ಆಚರಿಸಲಾಯಿತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಡಾ॥ ಮಲ್ಲಿಕಾರ್ಜುನ ಸ್ವಾಮಿಜಿಯವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುತ್ತಾ 'ಭಾರತೀಯರಾದ ನಾವು ಇಂಗ್ಲೀಷ್ ಭಾಷೆಯ ವ್ಯಾಮೋಹದಿಂದ ಹೊರಬರಬೇಕು. ವಿದ್ಯೆಯನ್ನು ಉದ್ಯೋಗ ದೃಷ್ಟಿಯಿಂದ ಕಲಿಯದೇ ಜ್ಞಾನಾರ್ಜನೆಗಾಗಿ ಅಧ್ಯಯನ ಮಾಡಬೇಕು. ಈ ಸಂಸ್ಕೃತ ಜ್ಞಾನದಿಂದ ನಾವು ಎಲ್ಲವನ್ನು ತಿಳಿದಂತಾಗುತ್ತದೆ' ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಶಿವಮೊಗ್ಗ ಜಿಲ್ಲಾ ಶಾಸಕರಾದ ಕೆ.ಬಿ. ಪ್ರಸನ್ನಕುಮಾರ್ ಮಾತನಾಡುತ್ತ ಎಲ್ಲರೂ ಕಲಿಯಬಹುದಾದ ಸಂಸ್ಕಾರಯುತ ಭಾಷೆ ಸಂಸ್ಕೃತ. ಇದು ಎಲ್ಲರ ಮನೆಯ ಮಾತಾಗಬೇಕು ಎಂದು ತಿಳಿಸಿದರು. ಸಂಸ್ಕೃತ ವಿಷಯ ಪರಿವೀಕ್ಷಕರಾದ ಜಿ.ಆರ್. ಗಂಗಾಧರ್, ಕವಲೇದುರ್ಗದ ಶ್ರೀಗಳು, ಮುಖ್ಯ ಅತಿಥಿಗಳಾಗಿ ಆಗಮಿಸಿದ ಉದ್ಯಮಿ ಸುಬ್ಬಯ್ಯನವರು, ಚಿತ್ರದುರ್ಗವಲಯದ ಸಂಯೋಜಕರಾದ ಶಂಕರೇಗೌಡ ಇವರು ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ಅಲಂಕಾರ ಶಾಸ್ತ್ರದ ಬಗ್ಗೆ ಡಾ॥ ಸನತ್ಕುಮಾರ್ ಮತ್ತೂರು ಇವರು ಉಪನ್ಯಾಸವನ್ನು ನೀಡಿದರು. ತರ್ಕಶಾಸ್ತ್ರದ ಬಗ್ಗೆ ವಿದ್ವಾನ್ ವಿಕಾಸ ಸವಾಯ್ ಅವರು ಉಪನ್ಯಾಸವನ್ನು ನೀಡಿದರು. ಸಂಸ್ಕೃತ ಸಂಭಾಷಣೆಯ ಮಹತ್ವದ ಬಗ್ಗೆ ಟಿ.ವಿ. ನರಸಿಂಹ ಮೂರ್ತಿಯವರು ತಿಳಿಸಿದರು.

ಶಿವಮೊಗ್ಗ ಜಿಲ್ಲೆಯ ಎಲ್ಲಾ ಸಂಸ್ಕೃತ ಪಾಠಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದು, ಸಂಸ್ಕೃತ ಶ್ಲೋಕ ಕಂಠಪಾಠ, ಸಂಸ್ಕೃತ ರಸಪ್ರಶ್ನೆ, ಸಂಸ್ಕೃತ ಕಥಾ ಸ್ಪರ್ಧೆ, ಸಂಸ್ಕೃತ ಸಾಮೂಹಿಕ ಗೀತಗಾಯನ, ಸ್ಪಷ್ಟ ಓದು, ಇನ್ನೂ ಮುಂತಾದ ಸ್ಪರ್ಧೆಗಳನ್ನು ನಡೆಸಲಾಯಿತು.

ಸಮಾರೋಪ ಸಮಾರಂಭದಲ್ಲಿ ಡಾ॥ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಕವಲೇದುರ್ಗ. ಇವರು ಉಪಸ್ಥಿತರಿದ್ದು, ಡಾ॥ ಸನತ್ಕುಮಾರ್ ರವರು ಸಮಾರೋಪ ಭಾಷಣದಲ್ಲಿ ''ನಾವು ಸಂಸ್ಕೃತ ಅಭ್ಯಾಸದಿಂದ ಸಾಹಿತ್ಯ , ಸಂಸ್ಕೃತಿ, ವೇದಗಳ ಜ್ಞಾನ ಮುಂತಾದವುಗಳಿಂದ ನೈಜ ಭಾರತವನ್ನು ಅರಿಯಲು ಸಾಧ್ಯ'' ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಕೈಗಾರಿಕೋದ್ಯಮಿ ಎಸ್. ರುದ್ರೇಗೌಡರು ಉಪಸ್ಥಿತರಿದ್ದು ಮಕ್ಕಳಿಗೆ ಬಹುಮಾನ ನೀಡಿದರು ಹಾಗೂ ಸಂಸ್ಕೃತ ಪಾಠಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಯಿತು.

ಸಂಸ್ಕೃತ ಕಾಲೇಜಿನ ಪ್ರಾಚಾರ್ಯರಾದ ವಿದ್ವಾನ್ ಸಿ. ರೇಣುಕಾರಾಧ್ಯ ಇವರು ಸ್ವಾಗತಿಸಿದರು. ಮತ್ತೂರು ಸಂಸ್ಕೃತ ಪಾಠಶಾಲೆಯ ಶಿಕ್ಷಕರಾದ ಅನಂತಕೃಷ್ಣರವರು ನಿರೂಪಿಸಿದರು. ಶ್ರೀ ಬೆಕ್ಕಿನ ಕಲ್ಮಠ ಸಂಸ್ಕೃತ ಪಾಠಶಾಲೆಯ ಶಿಕ್ಷಕಿ ದೀಪಶ್ರೀ ಎಸ್. ವಂದಿಸಿದರು.



## ಸಂಸ್ಕೃತೋತ್ಸವ ಉದ್ಘಾಟನೆ

ಹೊನ್ನಾಳಿ : ಶ್ರೀ ದಿಡ್ಡಿ ಆಂಜನೇಯ ಸ್ವಾಮಿ ಸಂಸ್ಕೃತ ಪಾಠಶಾಲೆ ವತಿಯಿಂದ ದಿ : 20-09-2013 ರಂದು ಸಂಸ್ಕೃತೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಹೊನ್ನಾಳಿ ಶಾಸಕರಾದ ಶ್ರೀ ಡಿ.ಜಿ. ಶಾಂತನಗೌಡರು, ಉದ್ಘಾಟಿಸಿ, ''ಬಲು ಪ್ರಾಚೀನ ಭಾಷೆ ಯಾಗಿರುವ ಸಂಸ್ಕೃತವು ಭಾರತದ ಉನ್ನತಿಗೆ, ತನ್ನದೇ ಆದ ಕೊಡುಗೆ ನೀಡಿರುವ ಸಂಸ್ಕೃತ ಭಾಷೆಯನ್ನು ಹೆಚ್ಚು ಹೆಚ್ಚಾಗಿ ಅಭ್ಯಾಸ ಮಾಡಿ ತನ್ಮೂಲಕ ಸ್ವಯಂ ಏಳಿಗೆಯೊಂದಿಗೆ ನಾಡಿನ ಏಳ್ಗೆಯನ್ನು ಸಾಧಿಸಿರಿ'' ಎಂದು ವಿದ್ಯಾರ್ಥಿಗಳಿಗೆ ಹಿತನುಡಿದರು.

ಮುಖ್ಯ ಅತಿಥಿಗಳಲ್ಲೊಬ್ಬರಾದ, ಶ್ರೀ ಹೊನ್ನಾಳಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಕೆ.ಸಿ. ಮಲ್ಲಿಕಾರ್ಜುನ್‌ರವರು, ತಮ್ಮ ಭಾಷಣದಲ್ಲಿ ಸಂಸ್ಕೃತವನ್ನು ಜನ ಸಾಮಾನ್ಯರು ಪ್ರೀತಿಸಿ, ಆಡುಭಾಷೆಯಾದಾಗ ಮಾತ್ರ ಭಾಷಾ ಬೆಳವಣಿಗೆ ಆಗುತ್ತದೆ ಈ ನಿಟ್ಟಿನಲ್ಲಿ ಇಂಥಹ ಕಾರ್ಯಕ್ರಮಗಳು ಸಹಕಾರಿ ಯಾಗುತ್ತವೆ ಎಂದು ಹೇಳಿದರು.

ಇನ್ನೊಬ್ಬ ಮುಖ್ಯ ಅತಿಥಿಗಳಲ್ಲೊಬ್ಬರಾದ ಹೊನ್ನಾಳಿ ಆರಕ್ಷಕ ವೃತ್ತ ನಿರೀಕ್ಷಕರು ಶ್ರೀ ಚನ್ನಕೇಶವ ಬಿ ಟಿಂಗರಿಕರ್ ರವರು ''ಸಂಸ್ಕೃತೋತ್ಸವದಂಥ ಕಾರ್ಯಕ್ರಮಗಳು ಹೆಚ್ಚಾಗಿ ನಡೆದು ಸುಭಾಷಿತಗಳ ನೀತಿ ಬೋಧನೆ ನಮಗೆಲ್ಲಾ ದಾರಿದೀಪವಾಗಲಿ'' ಎಂದು ಹಾರೈಸಿದರು.

ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಂದ ಸಂಸ್ಕೃತ ನಾಟಕ, ಗೀತಾ ಪಠನ ಮುಂತಾದ ಕಾರ್ಯಕ್ರಮಗಳು ಜರುಗಿದವು.



## ಸಂಸ್ಕೃತ ಸಪ್ತಾಹ ಕಾರ್ಯಕ್ರಮದ ಸಮಾರೋಪ

ಶ್ರಾವಣ ಮಾಸದ ಅಂಗವಾಗಿ ನಡೆದ ಸಂಸ್ಕೃತ ಸಪ್ತಾಹ ಕಾರ್ಯಕ್ರಮದ ಸಮಾರೋಪ ಸಮಾರಂಭವು ಪಾಠಶಾಲೆಯ ವಿದ್ಯಾರ್ಥಿಗಳಿಂದ ವೇದಘೋಷ ದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯ ಕ್ರಮದ ಸಾನಿಧ್ಯವನ್ನು ವಹಿಸಿ ಆಶೀರ್ವಚನ ಗೈದ ಪೂಜ್ಯ ಕಲ್ಲಯ್ಯಜ್ಜನವರು ಪ್ರತಿಯೊಬ್ಬರೂ ಜೀವನದಲ್ಲಿ ಸುಸಂಸ್ಕೃತ ರಾಗಬೇಕಾದರೆ ಸಂಸ್ಕೃತ ಭಾಷೆಯನ್ನು ಕಲಿಯಲೇಬೇಕೆಂದು ಹೇಳಿದರು. ಪೂಜ್ಯ ಗುರುವರ್ಯರಿಗೆ ಸೇವೆಯನ್ನು ಸಲ್ಲಿಸಬೇಕಾದರೆ ಪ್ರತಿಯೊಬ್ಬರೂ ಸಂಸ್ಕೃತ ಅಧ್ಯಯನ ದೊಂದಿಗೆ ಸಂಸ್ಕೃತ ಭಾಷೆಯಲ್ಲಿ ಜ್ಞಾನ ಸಂಪಾದನೆಯನ್ನು ಮಾಡಬೇಕೆಂದು ತಿಳಿಸಿದರು.

ನಿವೃತ್ತ ಮುಖ್ಯಾಧ್ಯಾಪಕರಾದ ಶ್ರೀ ಎನ್.ಎನ್. ಭಟ್ ದಂಪತಿಗಳನ್ನು ಪಾಠಶಾಲೆಯ ವತಿಯಿಂದ, ಪೂಜ್ಯ ಕಲ್ಲಯ್ಯಜ್ಜನವರು ಸನ್ಮಾನಿಸಿ ''ವಿದ್ಯಾವಾಚಸ್ಪತಿ'' ಬಿರುದನ್ನು ನೀಡಿದರು. ವಿದ್ವಾನ್ ಎನ್.ಎನ್. ಭಟ್ ಗುರುಗಳು ಮಾತನಾಡಿ ''ಗುರುಸೇವಾನಿಷ್ಠ''ರಾಗಬೇಕೆಂದು ತಿಳಿಸಿದರು.

ಪಾಠಶಾಲೆಯ ವಿದ್ಯಾರ್ಥಿಗಳಿಂದ ಭಗವದ್ಗೀತಾ ಪಠಣ ದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಮಿತಿಯ ಆಡಳಿತ ಅಧಿಕಾರಿ ಶ್ರೀ ಪಿ.ಸಿ. ಹಿರೇಮಠ ಮಾತನಾಡಿದರು. ಕಾರ್ಯಕ್ರಮ ಅಧ್ಯಕ್ಷತೆಯನ್ನು ವ್ಯವಸ್ಥಾಪಕರಾದ ಶ್ರೀ ಬಸವರಾಜಸ್ವಾಮಿ ಚ. ಹಿಡ್ಕಿಮಠ ವಹಿಸಿದ್ದರು.

ಐಕ್ಯಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.




**ಸಂಸ್ಕೃತದ ಪ್ರಚಾರ ಪ್ರಸಾರ ಇನ್ನಷ್ಟು ವ್ಯಾಪಕವಾಗಲಿ**

ಹಾಸನ, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲಾ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘಗಳು ಒಗ್ಗೂಡಿ ದಿನಾಂಕ : 22-09-2013 ಭಾನುವಾರ ಹಾಸನದ ಉತ್ತರ ಬಡಾವಣೆಯಲ್ಲಿರುವ ''ಸಂಸ್ಕೃತಮ್'' ಭವನದಲ್ಲಿ ಪೂರ್ವಾಹ್ಣ 10.30 ರಿಂದ ಅಪರಾಹ್ಣ 1.30 ವರೆಗೆ ''ಸಂಸ್ಕೃತೋತ್ಸವ''ವನ್ನು ನಡೆಸಿದವು.

''ಸಂಸ್ಕೃತಮ್'' ಅಧ್ಯಕ್ಷರಾದ ಶ್ರೀ ಮೋಹನ್‌ರವರು ಈ ಕಾರ್ಯಕ್ರಮವನ್ನು ದೀಪಬೆಳಗಿಸುವುದರ ಮೂಲಕ ಉದ್ಘಾಟಿಸಿ, ಸಂಸ್ಕೃತ ಸಂಬಂಧೀ ಕಾರ್ಯಗಳಿಗೆ ಯಥಾಶಕ್ತಿ ಸಹಾಯ-ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಈ ಕಾರ್ಯಕ್ರಮದಲ್ಲಿ ಪ್ರಧಾನವಾಗಿ ಉಪಸ್ಥಿತರಾಗಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಮಾನ್ಯ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು ಸಂಸ್ಕೃತ ಭಾಷೆ, ಇದರ ಸನಾತನತೆ, ಮಹಾನತೆ, ಗಹನತೆ, ಪ್ರಯೋಜನ, ವ್ಯಾಪ್ತಿ ಹೀಗೆ ಹಲವು ಮಜಲುಗಳ ವಿಚಾರಗಳನ್ನು ತಿಳಿಸುವುದರೊಂದಿಗೆ ಪಾಠಶಾಲೆ, ಶಿಕ್ಷಕ ಮತ್ತು ವಿದ್ಯಾರ್ಥಿಗಳ ಬಗ್ಗೆ ಶೈಕ್ಷಣಿಕವಾಗಿ ಹೇಗಿರಬೇಕು ಮತ್ತು ಈ ಎಲ್ಲಕ್ಕೂ ವಿ.ವಿ.ಯು ಹೇಗೆ ಉತ್ತೇಜನ, ಸಹಾಯ, ಸಹಕಾರ, ಮಾರ್ಗದರ್ಶನಗಳನ್ನು ನೀಡುತ್ತದೆಂದು ವಿವರವಾಗಿ ತಿಳಿಸಿದರು. ಹಾಸನ, ಅವಿಭಜಿತ ದ.ಕ. ಮತ್ತು ಚಿಕ್ಕಮಗಳೂರು ಜಿಲ್ಲೆಯ ಭಾಗಗಳಲ್ಲಿ ಬಹಳ ಹಿಂದಿನ ಕಾಲದಿಂದ ಈಗಿನವರೆಗೂ ಅನೂಚಾನವಾಗಿ ಪಂಡಿತ-ವಿದ್ವಾಂಸ- ಸಂಶೋಧಕರ ಸಂಖ್ಯೆಯು ವೃದ್ಧಿಸುತ್ತಾ ಬಂದಿದೆ. ಎಲ್ಲರು ಒಟ್ಟಿನಲ್ಲಿ ಸಂಸ್ಕೃತ ಮತ್ತು ವೇದ ಸಂಬಂಧಿ ವಿದ್ಯಾರ್ಥಿ-ಶಿಕ್ಷಕ, ಲೇಖಕ, ಸಾಹಿತಿ, ಸಂಶೋಧಕ ಪ್ರಚಾರಕ, ಪ್ರಸಾರಕ ರಾಗಬೇಕೆಂದು ಕಳಕಳಿಯಿಂದ ನುಡಿದರು.

ಹಾಸನದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ॥ ಪ್ರಸನ್ನರವರು ಆಯುರ್ವೇದವೇ ಮೊದಲಾದ ಎಲ್ಲ ವಿಜ್ಞಾನಕ್ಷೇತ್ರಗಳಲ್ಲಿ ಮತ್ತು ಎಲ್ಲ ಭಾಷೆಗಳಲ್ಲಿ ಸಂಸ್ಕೃತದ ಬಳಕೆ ಮತ್ತು ಮಹತ್ವಗಳನ್ನು ತಿಳಿಸಿದರು. ವಿ.ವಿ. ಶಾಖಾಧಿಕಾರಿ ವಿದ್ವಾನ್ ಶಿವಮೂರ್ತಿ ಆಡಳಿತಾತ್ಮಕ ಮಾಹಿತಿ ನೀಡಿದರು.

ಎಲ್ಲ ಜಿಲ್ಲೆಯ ಪಾಠಶಾಲಾ ವಿದ್ಯಾರ್ಥಿಗಳಿಗೆ ನಡೆಸಿದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ವೇದಿಕೆಯಲ್ಲಿದ್ದ ಗಣ್ಯರ ಮೂಲಕ ಬಹುಮಾನಗಳನ್ನು ವಿತರಿಸಲಾಯ್ತು. ಪಾಠಶಾಲಾ ಶಿಕ್ಷಕ ಸೇವೆಯಿಂದ ನಿವೃತ್ತಿ-ಹೊಂದಿದ ಹಾಸನದ ಶ್ರೀಮತಿ ನಾಗರತ್ನಮ್ಮ ಮತ್ತು ಕಣಕಟ್ಟೆಯ ಶ್ರೀಮತಿ ಸ್ವರ್ಣಲತಾ ರವರನ್ನು ಪಾಠಶಾಲಾ ಶಿಕ್ಷಕರ ಸಂಘದ ವತಿಯಿಂದ ಕುಲಪತಿಗಳು ಸನ್ಮಾನಿಸಿದರು.

ಎಲ್ಲ ಪಾಠಶಾಲೆಗಳಿಂದಾಗಮಿಸಿದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು.

ವೇದಿಕೆಯಲ್ಲಿ ''ಸಂಸ್ಕೃತಮ್'' ಹಾಸನದ ಕಾರ್ಯದರ್ಶಿ ಶ್ರೀ ಚಂದ್ರಕಾಂತ ಪಡೆಸೂರ್, ಶ್ರೀ ಶಂಕರಮಠದ ಧರ್ಮಾಧಿಕಾರಿ ಶ್ರೀ ಶ್ರೀಕಂಠಯ್ಯ, ಮೈಸೂರು ವಲಯ ಸಂಯೋಜಕ ವಿದ್ವಾನ್ ರಾಜಶೇಖರಯ್ಯ, ಕೊಳ್ಳೇಗಾಲ, ಮೈಸೂರು ವಲಯ ವಿಷಯ ಪರಿವೀಕ್ಷಕ ವಿದ್ವಾನ್ ವಿ.ಎಲ್. ಹೆಗಡೆ ಮೈಸೂರು, ಯೋಜನಾ ಸಹಾಯಕಿ ವಿದುಷಿ ಶ್ರೀಮತಿ ಸಾವಿತ್ರಿ ಪೂಜಾರಿ ಇವರುಗಳು ಉಪಸ್ಥಿತರಿದ್ದರು.

ಹಾಸನ ಜಿಲ್ಲಾ ಪಾಠಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ವಿದ್ವಾನ್ ಅನಂತರಾಮು ಬೇಲೂರು ಪ್ರಾಸ್ತಾವಿಕ ಭಾಷಣವನ್ನು, ಪು॥ ಬಿ.ಎಲ್. ವಿಶ್ವನಾಥ ಶರ್ಮಾ ಬೇಲೂರು ವಂದನಾರ್ಪಣೆಯನ್ನು, ವಿದುಷಿ ಶ್ರೀಮತಿ ಕಾಮಾಕ್ಷಿ ಹಾಸನ ಕಾರ್ಯಕ್ರಮ ನಿರೂಪಣೆಯನ್ನು ಮಾಡಿದರು. ಹೀಗೆ ''ಸಂಸ್ಕೃತೋತ್ಸವ''ವು ಸಂಪನ್ನಗೊಂಡಿತು.

**ಸಂಸ್ಕೃತ ಸಪ್ತಾಹ ಕಾರ್ಯಕ್ರಮ ಮುಕ್ತಾಯ**

ಸಂಸ್ಕೃತ ಸಪ್ತಾಹ ಕಾರ್ಯಕ್ರಮವನ್ನು ದಿ.26-08-2013 ರಂದು ಶ್ರೀ ಗಜಾನನ ಸಂಸ್ಕೃತ ಮಹಾಪಾಠಶಾಲಾ, ಸೂಡಿಯಲ್ಲಿ ಬೆಳಿಗ್ಗೆ ಶ್ರೀ ಜಿ.ಆರ್. ಜೋಶಿ ಇವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಜೋಶಿಯವರು ಸಂಸ್ಕೃತಭಾಷಾ ಸರಳವಾಗಿರುವುದು. ಸಂಸ್ಕೃತದಿಂದ ಮಕ್ಕಳು ಉತ್ತಮ ಸಂಸ್ಕಾರವಂತರಾಗುವರು ಎಂದು ಸೂಚಿಸುತ್ತ ಸಂಸ್ಕೃತ ಸಂಭಾಷಣಾ ಶಿಬಿರಕ್ಕೆ ಚಾಲನೆ ನೀಡಿದರು. ಸದರ ಶಾಲಾ ಶಿಕ್ಷಕಿಯರಾದ ಶ್ರೀಮತಿ ಎಸ್.ಎಸ್. ಬಾಸಗಿ ಶಿಬಿರ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು.

ದಿ.03-09-2013ರಂದು ಸಂಸ್ಕೃತ ಸಪ್ತಾಹ ಶಿಬಿರವನ್ನು ಸಮಾರೋಪ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಜಿ.ಆರ್. ಜೋಶಿ ಇವರು ಮಕ್ಕಳ ಸಾಧನೆ ಹಾಗೂ ಶಿಕ್ಷಕಿಯರ ಪರಿಶ್ರಮದಿಂದ ಈ ಸಪ್ತಾಹ ಯಶಸ್ವಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಮಕ್ಕಳು ತಮ್ಮ ತಮ್ಮ ಅಭಿಪ್ರಾಯದೊಂದಿಗೆ ಧನ್ಯವಾದಗಳನ್ನು ಸಮರ್ಪಿಸಿದರು.

**ಸಂಸ್ಕೃತ ಹಾಗೂ ಸಂಸ್ಕೃತಿಯ ಸಮೃದ್ಧಿಗಾಗಿ ಸಂಸ್ಕೃತೋತ್ಸವ**

ಶಿರಸಿ ಸ್ವರ್ಣವಲ್ಲಿಯ ಶ್ರೀ ರಾಜರಾಜೇಶ್ವರೀ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ದಿನಾಂಕ 06 ಮತ್ತು 07 ನವೆಂಬರ್ 2013ರಂದು 'ಸಂಸ್ಕೃತೋತ್ಸವ ಹಾಗೂ ರಾಜ್ಯಮಟ್ಟದ ಶಾಸ್ತ್ರವಾಕ್ಪ್ರತಿಯೋಗಿತಾ' ಕಾರ್ಯಕ್ರಮವು ಸಂಪನ್ನಗೊಂಡಿತು. ಸಂಸ್ಕೃತೋತ್ಸವದಲ್ಲಿ ಸುಮಾರು 25ಕ್ಕೂ ಹೆಚ್ಚು ಪ್ರಕಾರದ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಅನೇಕ ಪ್ರೌಢಶಾಲೆ, ಸಂಸ್ಕೃತ ಪಾಠಶಾಲೆ, ಮಹಾಪಾಠಶಾಲೆಗಳಿಂದ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ, ಬಹುಮಾನವನ್ನು ಪಡೆದಿದ್ದಾರೆ. ಅಲ್ಲದೇ ರಾಜ್ಯಮಟ್ಟದ ಶಾಸ್ತ್ರವಾಕ್ಪ್ರತಿಯೋಗಿತಾ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಕಾಲೇಜುಗಳ 75ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಗಮನ ಸೆಳೆದರು.

ಎರಡು ದಿನಗಳ ಕಾಲ ನಡೆದ ಸಂಸ್ಕೃತೋತ್ಸವವನ್ನು ಶ್ರೀಮಠದ ಆಸ್ಥಾನ ವಿದ್ವಾಂಸರಾದ ಶ್ರೀ ಭಾಲಚಂದ್ರ ಶಾಸ್ತ್ರಿಗಳು ಉದ್ಘಾಟಿಸಿದರು. ಸಭೆಯಲ್ಲಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎನ್.ಜಿ.ಹೆಗಡೆ ಭಟ್ರಕೇರಿ, ಹಾಗೂ ವಿದ್ವಾಂಸರಾದ ಡಾ॥ ಸೂರ್ಯನಾರಾಯಣ ಭಟ್ಟ, ಹಿತ್ಲಳ್ಳಿ ಉಪಸ್ಥಿತರಿದ್ದರು. ಸಂಸ್ಕೃತೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ವಿದ್ವಾನ್ ಭಾಲಚಂದ್ರ ಶಾಸ್ತ್ರಿಗಳವರು - ಕೆಲವು ದಶಕಗಳ ಹಿಂದಿನ ವಾತಾವರಣವನ್ನು ನೆನಪಿಸಿಕೊಂಡರೆ, ಅಧ್ಯಯನಕ್ಕೆ ಅವಕಾಶ ಹಾಗೂ ಪ್ರೋತ್ಸಾಹಗಳು ಹಿಂದಿಗಿಂತಲೂ ಇಂದು ಹೇರಳವಾಗಿವೆ. ಆದರೆ ಅಧ್ಯಯನದಲ್ಲಿ ನಿಷ್ಠೆ ಹಾಗೂ ತಳಸ್ಪರ್ಶಿ ಜ್ಞಾನಗಳ ದೃಷ್ಟಿಯಿಂದ ನೋಡಿದರೆ ಇಂದಿಗಿಂತಲೂ ಹಿಂದಿನ ಕಾಲದಲ್ಲಿಯೇ ಹೆಚ್ಚು ಸಮರ್ಪಕವಾಗಿತ್ತೆಂದು ತೋರುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನಾಸಕ್ತಿ ಹಾಗೂ ತಳಸ್ಪರ್ಶಿಜ್ಞಾನವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಇಂಥ ಸ್ಪರ್ಧಾಕಾರ್ಯಕ್ರಮಗಳನ್ನು ಆಯೋಜಿಸಿರುವುದು ನಿಜಕ್ಕೂ ಸಮಂಜಸವೆಂದು ನುಡಿದರು.

**ವೇದಾಂತ ಚಿಂತನ ಗೋಷ್ಠೀ**

ಗುರುಕುಲ ಶಿಕ್ಷಣ ಟ್ರಸ್ಟ್ ಅಡಿಯಲ್ಲಿ ಬರುವ ಸಿ.ಎಲ್.ವೈ.ಸಂಸ್ಕೃತ ಸ್ನಾತಕೋತ್ತರ ಅಧ್ಯಯನ ಕೇಂದ್ರ ಧಾರವಾಡ ಹಾಗೂ ಸಂಸ್ಕೃತ ಪಾಠಶಾಲೆಗಳ ಸಹಯೋಗದೊಂದಿಗೆ ದಿನಾಂಕ 07-08-2013 ರಂದು ಮಧ್ಯಾಹ್ನ ಗುರುಪೂರ್ಣಿಮಾ ಹಾಗೂ ಶ್ರೀ ವಿದ್ಯಾರಣ್ಯ ಜಯಂತಿ ಅಂಗವಾಗಿ ವೇದಾಂತ ಶಾಸ್ತ್ರ ಚಿಂತನ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾಲೇಜಿನ ವೇದಾಂತ ಶಾಸ್ತ್ರದ ಪ್ರಾಧ್ಯಾಪಕರಾದ ವಿದ್ವಾನ್ ಈಶ್ವರ ಪಿ. ಭಟ್ಟ ಇವರು ಪ್ರಸ್ಥಾನತ್ರಯಗಳನ್ನು ವಿವರಿಸಿದರು. ಪ್ರಾಚಾರ್ಯ ಶ್ರೀಧರಶಾಸ್ತ್ರಿ ಎನ್. ಇನಾಮದಾರ ಇವರು ಜಗದ್ಗುರು ಶಂಕರಭಗವತ್ಪಾದರ ನಂತರ ಅದ್ವೈತ ಬ್ರಹ್ಮವಿದ್ಯಾ ಪರಂಪರೆಗೆ ಮಹತ್ತರವಾದ ಕೊಡುಗೆ ನೀಡಿದ ಮಹಾಪುರುಷರಲ್ಲಿ ಶ್ರೀ ವಿದ್ಯಾರಣ್ಯರು ಅಗ್ರಗಣ್ಯರು. ಪರಕೀಯರ ಆಕ್ರಮಣದಿಂದ ಅಳಿದು ಹೋಗುವ ಅಪಾಯದ ಅಂಚಿನಲ್ಲಿದ್ದ ಸನಾತನ ಧರ್ಮ-ಸಂಸ್ಕೃತಿಗಳನ್ನು ಸಂರಕ್ಷಿಸಿ ಪುನರುಜ್ಜೀವನಗೊಳಿಸಿದ ಮಹಾನ್ ವಿಭೂತಿಪುರುಷರು ಎಂದರು.






ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಡಾ|| ಮಹೇಶ್ವರ ಶಾಸ್ತ್ರಿಗಳು ಮಾತನಾಡಿ ಜ್ಞಾನಕ್ಕೆ ಭಕ್ತಿ, ಕರ್ಮ, ಉಪಾಸನಾಮಾರ್ಗಗಳು ಸಹಕಾರಿಯಾಗಿವೆ ಮತ್ತು ವೇದವಾಙ್ಮಯಗಳು ಮಾನವನ ಕಲ್ಯಾಣಕ್ಕಾಗಿ ಇವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ಸದಸ್ಯರು ಹಾಗೂ ಗುರುಕುಲ ಶಿಕ್ಷಣ ಟ್ರಸ್ಟ್ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಪಂ. ಜಯತೀರ್ಥಾಚಾರ್ಯ ಮಳಗಿ ಇವರು ಶ್ರೀ ವಿದ್ಯಾರಣ್ಯರು ಮಾಡಿದ ಸಾಧನೆ ಅನುಪಮವಾದದ್ದು. ಸನಾತನ ಧರ್ಮಕ್ಕೆ ಆಧಾರವಾದ ಸಮಗ್ರ ವೇದವಾಙ್ಮಯಕ್ಕೆ ಪ್ರಾಮಾಣಿಕ ಭಾಷ್ಯಗಳ ರಚನೆಗೆ ಪ್ರೇರಕ ಶಕ್ತಿಯಾಗಿ ವೇದಾರ್ಥಪ್ರಕಾಶನಗೊಳಿಸಿದ ಕೀರ್ತಿ ಇವರಿಗಿದೆ. ವಿಶ್ವವಂದ್ಯ ವಿಭೂತಿಪುರುಷರಾದ ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳ ಅನುಪಮ ವ್ಯಕ್ತಿತ್ವ ಮತ್ತು ಮಹತ್ತರವಾದ ಕೊಡುಗೆಗಳನ್ನು ಸ್ಮರಿಸಿ ಅವರಿಗೆ ಗೌರವ ಸಮರ್ಪಿಸುವುದು ನಮ್ಮ ಕರ್ತವ್ಯವಾಗಿದೆ. ಅಪೌರುಷೇಯವಾದ ವೇದಗಳು ಜ್ಞಾನರಾಶಿಗಳು. ಇವುಗಳು ಮನುಷ್ಯನನ್ನು ಜ್ಞಾನಮಾರ್ಗಕ್ಕೆ ಕೊಂಡೊಯ್ಯಲು ಸಹಕಾರಿಯಾಗಿವೆ ಎಂದರು. ಕಾರ್ಯಕ್ರಮದಲ್ಲಿ ಸಂಸ್ಕೃತ ಕಾಲೇಜು ಹಾಗೂ ಪಾಠಶಾಲೆಗಳ ವಿದ್ಯಾರ್ಥಿಗಳು ಅಧ್ಯಾಪಕರು ಭಾಗವಹಿಸಿದ್ದರು. ಸಂಸ್ಕೃತಕಾಲೇಜಿನ ಪ್ರಾಧ್ಯಾಪಕರಾದ ವಿದ್ವಾನ್ ಸುಬ್ರಾಯ ಭಟ್ಟ ಗಣ್ಯರನ್ನು ಸ್ವಾಗತಿಸಿ ಕಾರ್ಯಕ್ರಮವನ್ನು ನಿರೂಪಿಸಿದರು. ವಿದ್ವಾನ್ ರಾಮಕೃಷ್ಣ ಭಟ್ಟ ವಂದಿಸಿದರು.

**ಪ್ರತಿಭಾ ಪುರಸ್ಕಾರ ಸಮಾರಂಭ**

ಶ್ರೀಮತ್ತಮ್ಮಯ್ಯಾವಧಾನಿ ಸ್ಮಾರಕ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಕಳೆದ 8 ವರ್ಷಗಳಿಂದ ಮಹಾರಾಜಾ ಸಂಸ್ಕೃತ ಕಾಲೇಜಿನಲ್ಲಿ ಆಯೋಜಿಸಿಕೊಂಡು ಬಂದಿರುತ್ತೇವೆ. ಪ್ರಸಕ್ತ ಸಾಲಿನ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ದಿನಾಂಕ : 03-08-2013ರಂದು ಆಚರಿಸಲಾಯಿತು. ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸುವುದಕ್ಕಾಗಿ ದಿನಾಂಕ : 28-07-2013 ರಂದ ಆಶು ಪ್ರಬಂಧಸ್ಪರ್ಧೆಯನ್ನು ಏರ್ಪಡಿಸ ಲಾಗಿತ್ತು. ವಿದ್ವನ್ಮಧ್ಯಮಾ ದ್ವಿತೀಯ ಮತ್ತು ತೃತೀಯ ಹಾಗೂ ವಿದ್ವದುತ್ತಮಾ ಪ್ರಥಮ ಮತ್ತು ದ್ವಿತೀಯ ತರಗತಿಯ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ನೀಡಲಾಗಿತ್ತು. 6 ವಿದ್ಯಾರ್ಥಿಗಳು ಸಂಸ್ಕೃತ ಸಾಹಿತ್ಯದ ವಿವಿಧ ಮುಖಗಳನ್ನು ಪರಿಚಯಿಸುವ ಸಮಾಜೋಪಯೋಗಿಯಾದ ವಿಷಯಗಳ ಬಗ್ಗೆ ಸಂಸ್ಕೃತದಲ್ಲಿ ವಿಷಯ ಮಂಡಿಸಿದರು. ಶ್ರೀ ವಿ.ಟಿ. ಅವಧಾನಿಯವರು ಸಂಸ್ಕೃತದಲ್ಲಿಯೇ ಪ್ರಸ್ತಾವನೆ ಯನ್ನು ಮಾಡಿ ಶ್ಲಾಘನೆಗೆ ಪಾತ್ರರಾದರು. ವೇದ ವಿದ್ಯಾರ್ಥಿಗಳು ಋಗ್ವೇದ, ಶುಕ್ಲಯಜುರ್ವೇದ, ಕೃಷ್ಣಯಜುರ್ವೇದ ಮತ್ತು ಸಾಮವೇದಗಳಲ್ಲಿ ಸಂಹಿತಾ, ಪದ, ಕ್ರಮ, ಜಟಾ, ಘನ ಮುಂತಾದ ವಿಕೃತಿ ಪಾಠವನ್ನು ಪ್ರಸ್ತುತ ಪಡಿಸಿದರು. ನಿರ್ದೇಶಕರಾದ ಡಾ|| ಗಿರೀಶ್ ಚಂದ್ರರವರು ಅಧ್ಯಕ್ಷೀಯ ಭಾಷಣವನ್ನು ಮಾಡಿದರು. ವಿದ್ವಾನ್ ಜಿ. ಮಂಜುನಾಥ್ ರವರು ಸ್ವಾಗತಿಸಿದರು. ವಿದ್ವಾನ್ ಎನ್. ಮುರಳೀಧರ ರವರು ಕಾರ್ಯಕ್ರಮವನ್ನು ನಿರ್ವಹಿಸಿದರು. ವಿದ್ವಾನ್ ಗಂಗಾಧರ ವಿ. ಭಟ್ಟ ರವರು ಸಂಯೋಜಕರಾಗಿ ಕಾರ್ಯಕ್ರಮವನ್ನು ರೂಪಿಸಿದ್ದರು.

# ವಲಯ ಮಟ್ಟದ ವಿವಿಧ ಸಂಸ್ಕೃತ ಸ್ಪರ್ಧೆಗಳು

ಹಾಸನ : ದಿನಾಂಕ 23-11-2013 ರಂದು ಮೈಸೂರು ವಲಯ ಮಟ್ಟದ 3ನೇ ಹಂತದ ಭಗವದ್ಗಿತಾ ಕಂಠಪಾಠ, ಅಮರಕೋಶ ಕಂಠಪಾಠ, ಸಂಸ್ಕೃತ ಭಾಷಣ ಸ್ಪರ್ಧೆಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಸಂಸ್ಕೃತ ನಿರ್ದೇಶನಾಲಯದ ವತಿಯಿಂದ ಸಂಸ್ಕೃತ ಭವನಮ್ ಹಾಸನ ಇಲ್ಲಿ ನಡೆಸಲಾಯಿತು.

ಹಾಸನ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಈ ನಾಲ್ಕು ಜಿಲ್ಲೆಯ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೆಳಿಗ್ಗೆ 10.30 ಕ್ಕೆ ಉದ್ಘಾಟನೆ ನೆರವೇರಿತು.

ಸ್ಪರ್ಧೆಗಳು ಪೂರ್ಣಗೊಂಡ ನಂತರ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲು ಮದ್ಯಾಹ್ನ 3.00 ಗಂಟೆಗೆ ಸಮಾರೋಪ ಸಮಾರಂಭವನ್ನು ನಡೆಸಲಾಯಿತು.

ಕಾರ್ಯಕ್ರಮದ ಸ್ವಾಗತವನ್ನು ಶ್ರೀಮತಿ ಸರಸ್ವತಮ್ಮ ಇವರು ನಡೆಸಿಕೊಟ್ಟರು.

ಕಂಠಪಾಠ ಸ್ಪಧಾಕಾರ್ಯಕ್ರಮವನ್ನು ಮೈಸೂರು ವಲಯ ಸಂಯೋಜಕರಾದ ಶ್ರೀ ಸಿ. ರಾಜಶೇಖರಮೂರ್ತಿ ಹಾಗೂ ಸಂಸ್ಕೃತ ಪರಿವೀಕ್ಷಕರಾದ ಶ್ರೀ ವಿ.ಎಲ್. ಹೆಗಡೆಯವರು ಯಶಸ್ವಿಯಾಗಿ ನಡೆಸಿಕೊಟ್ಟರು. ನಮಾರೋಪ ಸಮಾರಂಭದಲ್ಲಿ ಭಗವದ್ಗೀತೆಯ ಕಂಠಪಾಠದ ಮಹತ್ವವನ್ನು ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ನ್ಯಾಯ ನಿರ್ಣಾಯಕರಾಗಿ ಆಗಮಿಸಿದ್ದ ಆದಿ ಚುಂಚನಗಿರಿಯ ಸಂಸ್ಕೃತ ಕಾಲೇಜಿನ ಸಹಪ್ರಾಧ್ಯಾಪಕರಾದ ಶ್ರೀ ನಾಗೇಂದ್ರ, ಲಕ್ಷ್ಮಣಶರ್ಮಾ, ಹಾಸನದ ಸಂಸ್ಕೃತ ಪಾಠಶಾಲಾ ನಿವೃತ್ತ ಶಿಕ್ಷಕಿ ಶ್ರೀಮತಿ ನಾಗರತ್ನಮ್ಮ, ಎವಿಕೆ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ವಿನುತಾ, ವಾಸವಿ ಆಂಗ್ಲ ಮಾಧ್ಯಮಾ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಾದ ಮಂಜುನಾಥ್ ಭಾಗವಹಿಸಿದ್ದರು. ಹಾಸನ ಜಿಲ್ಲಾ ಸಂಘದ ಅಧ್ಯಕ್ಷರಾದ ಶ್ರೀ ಅನಂತ ರಾಮುರವರು ಭಾಗವಹಿಸಿದ್ದರು.

ನ್ಯಾಯ ನಿರ್ಣಾಯಕರ ಪರವಾಗಿ ಈ ನಾಗೇಂದ್ರವರು ಮಾತನಾಡಿದರು. ಶಿಕ್ಷಕರ ಪರವಾಗಿ ಕಡೂರು ಪಾಠಶಾಲೆಯ ಕೆ. ಮಧುಸೂಧನ್‌ರವರು ಮಾತನಾಡಿ ಸಂಸ್ಕೃತ ವಿಶ್ವ ವಿದ್ಯಾಲಯದಿಂದಾಗಿ ಇಂತಹ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ನಡೆಯುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಂಸ್ಕೃತವಮ್ ಭವನದ ಕಾರ್ಯದರ್ಶಿಗಳಾದ ಶ್ರೀ ಪರಮೇಶ್ವರ ಭಟ್‌ರವರು ಸಂಸ್ಕೃತ ಭಾಷೆಯ ಪ್ರಾಚೀನತೆ, ಹಾಗೂ ಪ್ರಸ್ತುತ ಸಂಸ್ಕೃತದ ಅವಶ್ಯಕತೆಯ ಬಗ್ಗೆ ಮಾತನಾಡಿದರು.

ಶ್ರೀಮತಿ ಕಾಮಾಕ್ಷಿ ಇವರು ವಂದನಾರ್ಪಣೆ ಸಲ್ಲಿಸಿದರು.

ಈ ಸ್ಪರ್ಧಾ ಕಾರ್ಯಕ್ರಮಕ್ಕೆ ಹಾಸನದ ಶಿಕ್ಷಕರು ತುಂಬಾ ಸಹಕಾರ ನೀಡಿದರು. ವಿದ್ಯಾರ್ಥಿಗಳ ನೊಂದಣಿ ಕಾರ್ಯವನ್ನು ಶ್ರೀ ಅನಂತರಾಮು, ಸರಸ್ವತಮ್ಮ ನೆರವೇರಿಸಿದರು.



2013 - 14 ನೇ ಸಾಲಿನ ಭಗವದ್ಗೀತಾ ಹಾಗೂ ಇತರ ಸ್ಪರ್ಧೆಗಳ ವಿಜೇತ ವಿದ್ಯಾರ್ಥಿಗಳ ಪಟ್ಟಿ

**1ನೇ ಹಂತದ ಸ್ಪರ್ಧೆಗಳು**

ದಿನಾಂಕ 21-11-2013 ಸ್ಥಳ : ಮೈಸೂರು, ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು

**ಭಗವದ್ಗಿತಾ ಕಂಠಪಾಠ**

| | |
|---|---|
| ಪ್ರಥಮ ಬಹುಮಾನ | ಶಶಾಂಕ್ ಯು. |
| ದ್ವಿತೀಯ ಬಹುಮಾನ | ಶ್ರೀಕಾತ ಸಂ. ಪಾಠಶಾಲೆ, ಮೈಸೂರು |
| | ಪರೀಕ್ಷಿತ ಬಿ. ವಸಿಷ್ಠ, ವಿಶ್ವಭಾರತಿ ಸಂ. ಪಾಠಶಾಲೆ, ಮೈಸೂರು |
| ತೃತೀಯ ಬಹುಮಾನ | ಮಾಧವಿ ಎಚ್.ವಿ.ಜೇ.ಎಸ್.ಎಸ್. ಸಂ. ಪಾ. ಚಾಮರಾಜನಗರ |

**ಅಮರಕೋಶ ಕಂಠಪಾಠ**

| | |
|---|---|
| ಪ್ರಥಮ ಬಹುಮಾನ | ಎ. ಬೋಧಾಯನ ಎಸ್. ವಿಶ್ವಾಮಿತ್ರ ಶ್ರೀಕಾಂತ ಸಂ.ಪಾ. ಮೈಸೂರು |
| ದ್ವಿತೀಯ ಬಹುಮಾನ | ಲಾವಣ್ಯ ಎನ್. ಶ್ರೀ ಶಂಕರವಿಲಾಸ ಸಂ.ಪಾ. ಮೈಸೂರು |
| ತೃತೀಯ ಬಹುಮಾನ | ರಂಜಿತ, ಜೆಎಸ್‌ಎಸ್ ಸಂ.ಪಾ. ಸುತ್ತೂರು |

**ಭಾಷಣ ಸ್ಪರ್ಧೆ**

| | |
|---|---|
| ಪ್ರಥಮ ಬಹುಮಾನ | ಅಮೃತ ವರ್ಷಿಣಿ, ಶ್ರೀ ಮಲೆ ಮಹದೇಶ್ವರ ಸ್ವಾಮಿ ಸಂ.ಪಾ. ಕೊಳ್ಳೇಗಾಲ |
| ದ್ವಿತೀಯ ಬಹುಮಾನ | ಶಿವರಾಜು ಎಸ್. ಶ್ರೀ ಮಲೆ ಮಹದೇಶ್ವರ ಸ್ವಾಮಿ ಸಂ.ಪಾ. ಕೊಳ್ಳೇಗಾಲ |
| ತೃತೀಯ ಬಹುಮಾನ | ಬಸವರಾಜು ಮುರಗಂಟ, ಶ್ರೀ ಕಾಲಭೈರವೇಶ್ವರ ವೇದಾಗಮ ಸಂ.ಪಾ. ಆದಿಚುಂಚನಗಿರಿ |

